# 89

# ವಿಜಯವೂ ದುರಂತವೋ?

## ಓದುವ ಮನೆಪಾಠ #39

VII. ಯೇಸುವಿನ ಸೇವೆಯ ಅಂತಿಮ ವಾರ (ಮುಂದುವರೆಯುವದು).
  H. ಶುಕ್ರವಾರ: ಯೇಸುವಿನ ಮರಣದ ದಿನ (ಮುಂದುವರೆಯುವದು).
    8. ಯೂದನ ಮರಣ: ಆತ್ಮ ಹತ್ಯೆ (ಮತ್ತಾಯ 27:3-10; ಅಪೊಸ್ತಲರ ಕೃತ್ಯಗಳು 1:18, 19).
    9. ಯೇಸುವಿನ ಮರಣ: ಕ್ರೂಜಿತನಾದನು.
      a. ಶಿಲುಬೆಯ ಪಯಣ (ಮತ್ತಾಯ 27:31ಬಿ-34; ಮಾರ್ಕ 15:20ಬಿ-22; ಲೂಕ 23:26-33; ಯೋಹಾನ 19:17).
      b. ಶಿಲುಬೆಯ ಮೇಲಿನ ಮೊದಲ ಮೂರು ತಾಸುಗಳು (ಮುಂದುವರೆದದ್ದು) (ಮತ್ತಾಯ 27:35, 37-39; ಮಾರ್ಕ 15:23-29; ಲೂಕ 23:33, 38; ಯೋಹಾನ 19:18-22).

## ಪೀಠಿಕೆ

ಯೇಸು ಮಾಡಿದ ಪ್ರತಿಯೊಂದು ವಿವರಗಳನ್ನು "... ಬರೆಯುವುದಾದರೆ ಬರೆಯ ಬೇಕಾದ ಪುಸ್ತಕಗಳಿಂದ ಲೋಕವೇ ಹಿಡಿಸದೇ ಹೋದಿತು" ಎಂದು ಅಪೊಸ್ತಲನಾದ ಯೋಹಾನನು ಬರೆಯುತ್ತಾನೆ (ಯೋಹಾನ 21:25). ಇದೇ ರೀತಿಯಲ್ಲಿ, ಯೇಸುವಿನ ಜೀವಿತದ ಪ್ರತಿಯೊಂದು ಘಟನೆಗಳನ್ನು ಅಂದರೆ ಶಿಲುಬೆಯ ಮೇಲಿನ ಆತನ ಮರಣ ಇಂಥ ಘಟನೆಗಳನ್ನು ಬರೆಯಲ್ಪಡಲು ಲೋಕದಲ್ಲಿ ಕೋಣೆಗಳು ಕಿಂಚಿತ್ತಾಗಿವೆ. ಎಷ್ಟು ಪುಸ್ತಕಗಳು ಮತ್ತು ಲೇಖನಗಳು, ಪ್ರಸಂಗಗಳು ಮತ್ತು ಹಾಡುಗಳು, ವರ್ಣಚಿತ್ರಗಳು ಮತ್ತು ಇತರ ಶ್ರೇಷ್ಟ ಕಲೆಗಳು ಈ ಮೂರು ತಾಸಿನಿಂದ ಪ್ರಭಾವಿತವಾದವುಗಳು ಆಗಿವೆ!

ಯೇಸುವಿನ ಜೀವಿತದೆಲ್ಲವನ್ನೂ ಸೂಚಿಸುವಾಗ ಮತ್ತು ಆತನ ಮರಣವನ್ನು ಮುಂತಿಳಿಸುವಾಗ ಪ್ರತಿಯೊಂದನ್ನು ನಾವು ನೆನಪಿಸಿಕೊಳ್ಳುವಾಗ ಶಿಲುಬೆಯ ಪ್ರಭಾವವು ಆಶ್ಚರ್ಯಕರವಾದದ್ದಲ್ಲ (ನೋಡಿರಿ ಮತ್ತಾಯ 1:21; ಲೂಕ 1:31; 2:30, 35[1]). ಅಸಂಖ್ಯಾತ ಸಂದರ್ಭಗಳಲ್ಲಿ, ಆತನು ತನ್ನ ಮರಣವನ್ನು ಮುಂತಿಳಿಸಿದ್ದನು (ನೋಡಿರಿ ಮತ್ತಾಯ 16:21; 17:22, 23; ಲೂಕ 18:31-33). ತಿಂಗಳ ಮುಂಚಿನ ಒಂದು ಸಂದರ್ಭದಲ್ಲಿ ತಾನು ಮರಣಿಸಲಿರುವುದನ್ನು ತಿಳಿದು ಸಹ ಆತನು "ಯೆರೂಸಲೇಮಿಗೆ ಹೋಗುವುದಕ್ಕೆ ಮನಸ್ಸುನ್ನು ದೃಢಮಾಡಿಕೊಂಡನು" (ಲೂಕ 9:51; KJV). ಗೋಲ್ಗಥಾದ ಮೇಲಿನ ಕ್ರಿಸ್ತನ ಆರು ತಾಸುಗಳು (ಮಾರ್ಕ 15:25, 33, 34, 37) ಆತನ ಸೇವೆಯ ಭಾವೋದ್ರೇಕದ ತುಟ್ಟತುದಿಯಾಗಿದೆ.[2]

ಹಿಂದಿನ ಎರಡು ಭಾಗ ಪಾಠದಲ್ಲಿ ಪಿಲಾತನು ಒಲ್ಲದ ಮನಸ್ಸಿನಿಂದ ಯೆಹೂದಿಗಳ ಬೇಡಿಕೆಗೆ ಒಳಗಾದನು ಮತ್ತು ಯೇಸುವನ್ನು ಶಿಲುಬೆಗೆ ಹಾಕಲು ಆಜ್ಞಾಪಿಸಿದನು ಎಂಬುದನ್ನು ನಾವು ನೋಡುತ್ತೇವೆ. ಯೇಸುವಿನ ವಿಚಾರಣೆಯ ಕೆಲ ಸಂಗತಿಗಳ ಆರಂಭದಲ್ಲಿ ಯೇಸುವಿಗೆ ಗುರುದ್ರೋಹವನ್ನು ಎಸಗಿದ ಯೂದನು ಆತ್ಮಹತ್ಯೆನ್ನು ಮಾಡಿಕೊಂಡನು. ಆ ಘಟನೆಯ ಜೊತೆ ಆರಂಭವಾಗುತ್ತದೆ ಮತ್ತು ಶಿಲುಬೆಯ ಮೇಲಿನ ಕ್ರಿಸ್ತನ ಕಥೆಯ ಜೊತೆ ಜೋಡಿ

ಸುವುದರೊಂದಿಗೆ ಈ ಪಾಠವು ಆರಂಭವಾಗುತ್ತದೆ. ಆ ಘಟನೆಯ ಮಹತ್ವದಿಂದಾಗಿ ಇದು ಇನ್ನೊಂದು ಎರಡು ಭಾಗದ ಪಾಠವಾಗಿದೆ.[3]

ಈ ಮಂಡನೆಯಲ್ಲಿ ಯೂದನ ಮರಣ ಮತ್ತು ಯೇಸುವಿನ ಮರಣವು ವ್ಯತ್ಯಾಸಾತ್ಮಕವಾಗಿ ಇರುವುದಾಗಿದೆ. ಅನೇಕ ವ್ಯತ್ಯಾಸಗಳು ಇಲ್ಲಿ ಗಮನಿಸಲ್ಪಟ್ಟಿವೆ. ಯೂದನ ನೇಣು ಹಾಕಿಕೊಂಡು ಸತ್ತನು; ಯೇಸು ಕ್ರೂಜೆಗೆ ಹಾಕುವುದರ ಮೂಲಕ ಸತ್ತನು. ಯೂದನು ತನ್ನ ಕೈಗಳಿಂದಲೇ ಮರಣಿಸಿದನು; ಯೇಸುವೋ ಇತರರ ಕೈಗಳಿಂದ ಸತ್ತನು. ಯೂದನು ತನ್ನ ಮನಸಾಕ್ಷಿಯಿಂದ ದೋಷಿ ಎಂದು ಎಣಿಸಲ್ಪಟ್ಟನು ಯೇಸುವಾದರೂ ಯೆಹೂದಿಗಳಿಂದ ದೋಷಿ ಎಂದು ಆರೋಪಿಸಲ್ಪಟ್ಟನು ಮತ್ತು ಪಿಲಾತನಿಂದ ಮರಣಶಿಕ್ಷೆಯನ್ನು ಹೊಂದಿದನು. ಹೇಗೂ, ನಾವು ವಿಶೇಷವಾಗಿ ತಿಳಿಯಬೇಕಾದದ್ದೆಂದರೆ ಯೂದನ ಮರಣವು ದುರಂತವಾದರೆ ಯೇಸುವಿನ ಮರಣವು ವಿಜಯವಾಗಿದೆ: ಯೂದನು ಪಶ್ಚಾತ್ತಾಪಪಡದ ಸ್ವಹಂತಕನಂತೆ ಸತ್ತನು, ಆದರೆ ಯೇಸು ನಿರ್ದೋಷಿಯಾದ ದೇವರ ಮಗನಾಗಿ ಮರಣಿಸಿದನು. ಅನ್ವಯವು ಮಾಡಲ್ಪಟ್ಟಾಗ, "*ನಿನ್ನ* ಮರಣವು ವಿಜಯವೋ ದುರಂತವೋ?" ಎಂಬ ಈ ಪ್ರಶ್ನೆಯು ಕೇಳಲ್ಪಡಬಹುದು.

## ದುರಂತ (ಮತ್ತಾಯ 27:3-10; ಅಪೊಸ್ತಲರ ಕೃತ್ಯಗಳು 1:18, 19)

ಈ ಘಟನೆಗಳ ಸರಣಿಯಲ್ಲಿ ಯೂದನ ಆತ್ಮಹತ್ಯೆಯ ವಿವರವನ್ನು ಎಲ್ಲಿ ಇರಿಸಬೇಕೆಂಬುದರ ಬಗ್ಗೆ ನಮಗೆ ಖಚಿತತೆಯು ಇಲ್ಲ. ಮತ್ತಾಯ 27 "ಮಹಾಯಾಜಕರೂ ಮತ್ತು ಜನರ ಹಿರಿಯರೂ ... ದೇಶಾಪತಿಯಾದ ಪಿಲಾತನಿಗೆ ಒಪ್ಪಿಸಿದರು" (ವಚನಗಳು 1, 2) - ಎಂಬ ವಿವರಣೆಯ ನಂತರದಲ್ಲಿ ಈ ಕಥೆಯನ್ನು ಸೇರಿಸಲಾಗಿದೆ ಮತ್ತು ಇದು ಸಂಭವಿಸಿದ ನಂತರವೇ ಅದು ಇರುವುದಾಗಿರಬಹುದು. ಗಮನಿಸಿ, ಯೂದನು "ಆ ಮೂವತ್ತು ರೂಪಾಯಿಗಳನ್ನು ಮಹಾಯಾಜಕರಿಗೂ ಹಿರಿಯರಿಗೂ ತಿರುಗಿ ತಂದು" ಒಪ್ಪಿಸಿದಾಗ ಅವರು ಪಿಲಾತನ ನ್ಯಾಯಾಸನದ ಮುಂದೆ ಇರಲಿಲ್ಲ, ಆದರೆ ಅವರು "ದೇವಾಲಯದಲ್ಲಿ" ಇದ್ದರು (ವಚನಗಳು 3, 5). ದೇಶಾಧಿಪತಿಗೆ ಯೇಸುವಿನ ಮರಣಕ್ಕೆ ಒಪ್ಪಿಗೆ ಕೊಟ್ಟಮೇಲೆ, ಎಲ್ಲಾ ವ್ಯವಸ್ಥೆಗಳು ಆದ ಮೇಲೆ,[4] ಮಹಾಯಾಜಕರು ತಮ್ಮ ಮುಂಜಾನೆಯ ಕರ್ತವ್ಯಗಳಿಗಾಗಿ ದೇವಾಲಯಕ್ಕೆ ಧಾವಿಸಿರಬಹುದು ಮತ್ತು ಅಲ್ಲಿಯೇ ಯೂದನು ಅವರನ್ನು ಕಂಡಿರಬಹುದು.[5]

ಯಾವುದೇ ರೀತಿಯಲ್ಲಿ, ಯೇಸುವಿನ ವಿಚಾರಣೆಯ ಕೆಲ ಸಂಗತಿಗಳಲ್ಲಿ, ಯೂದನು "ಆತನಿಗೆ ಮರಣದಂಡನೆಯ ತೀರ್ಪಾಯಿತೆಂದು ನೋಡಿ ಪಶ್ಚಾತ್ತಾಪಪಟ್ಟನು" (ವಚನ 3). ಯೇಸುವಿಗೆ ಮರಣದಂಡನೆಯಾದ ವಾಸ್ತವವು ಯೂದನನ್ನು ಆಶ್ಚರ್ಯದಿಂದ ಹಿಡಿಯಿತು. ಬಹುಶಃ ಆತನು ಯೇಸು ನಿರಪರಾಧಿಯಾಗಿದ್ದರಿಂದ (ವಚನ 4), ಆತನನ್ನು ಸೆರೆಹಿಡಿಯುವುದರಿಂದ ಆತನಿಗೆ ಯಾವ ಹಾನಿಯು ಸಂಭವಿಸದು ತಾನಂತು ಮೂವತ್ತು ಶೆಕಲ್‌ಗಳಿಂದ ಶ್ರೀಮಂತನಾಗಬಹುದು ಎಂದು ಆತನು ಯೋಚಿಸಿರಬಹುದು.[6] ಯೇಸು ಮರಣಿಸುವದು ನಿಶ್ಚಿತವಾದಾಗ ತಡವಾದ ಜ್ಞಾನವು ಯೂದನಲ್ಲಿ ವೃದ್ಧಿಯಾಗತೊಡಗಿತು.

ಯೂದನು ತನಗೆ ಕೆಲಸ ವಹಿಸಿದವರನ್ನು ಹುಡುಕಿ ಅವರು ದೇವಾಲಯದಲ್ಲಿ ಇರುವುದನ್ನು ಕಂಡುಕೊಂಡನು ಮತ್ತು ಯೇಸುವಿಗೆ ಗುರುದ್ರೋಹ ಮಾಡಿದ ಹಣವನ್ನು ಮರಳಿಸಲು ಯತ್ನಿಸಿದನು (ವಚನ 3), ಆದರೆ ಅವರು ಅವರನ್ನು ನಿರಾಕರಿಸಿದರು.[7] "ತಪ್ಪಿಲ್ಲದವನನ್ನು ಒಪ್ಪಿಸಿಕೊಟ್ಟು ನಾನು ಪಾಪಮಾಡಿದೆನು" ಎಂದು ಆತನು ಹೇಳಿದನು (ವಚನ 4). ಅವರು ನಿರ್ಲಕ್ಷದಿಂದ "ಅದು ನಮಗೇನು? ನೀನೇ ನೋಡಿಕೋ!" ಎಂದು ಉತ್ತರಿಸಿದರು (ವಚನ 4). ದೇಶದ್ರೋಹಿಗಳು ತಾವು ಮಾಡಿದ್ದರಿಂದ ಏಕಪ್ರಕಾರವಾಗಿ ಅಲ್ಲಗಳೆಯಲ್ಪಡುತ್ತಾರೆ.

ಚಳಿಯಿಂದ ಕಳಿಸಲ್ಪಟ್ಟ, ಕಲ್ಲ ಹೃದಯದ, ಯೂದನು ತಣ್ಣಗಾಗಿ ಕಲ್ಲು ಹಾಸಿನ ಮೇಲೆ ಹಣವನ್ನು ಎಸೆದನು ಮತ್ತು ಅಲ್ಲಿಂದ "ಹೊರಟುಬಿಟ್ಟನು" (ವಚನ 5). ಆದರೆ ಆತನು ಎಲ್ಲಿಗೆ ಹೋಗಿರಬಹುದು. ಯೆಹೂದಿಗಳ ತಾರತಮ್ಯವು ಆತನನ್ನು ನಿರಾಕರಿಸಿತು, ಮತ್ತು ಇತರ ಅಪೊಸ್ತಲರನ್ನು ಆತನು ಎದುರಿಸದಾದನು. ನನ್ನ ಮನದಲ್ಲಿ ಯೂದನು ದಕ್ಷಿಣದೆಡೆಗೆ ಯೆರೂಸಲೇಮಿನ ಕೇರಿಗಳ ಮೂಲಕ, ಪಸ್ಕಹಬ್ಬದ ಜನಜಂಗುಳಿಯನ್ನು ಕಣ್ಣಿಂದ ನೋಡ ಲಾರದೇ ಸರಿಸುತ್ತ ಪಟ್ಟಣದ ದಕ್ಷಿಣಗೋಡೆಯ ಹೊರಗೆ ಇರುವ ಕುಂಬಾರನ ಹೊಲವನ್ನು ತಲುಪುವ ತನಕ ಓಡಿದನು ಎಂದು ನಾನು ಊಹಿಸುವವನಾಗಿದ್ದೇನೆ.[8] ಅಲ್ಲಿ ಆತನು "ಉರ್ಲುಹಾಕಿಕೊಂಡನು" (ವಚನ 5).

ಯೂದನು ಅಲ್ಲಿಂದ ಹೋದ ಮೇಲೆ, ಮಹಾಯಾಜಕರು ಆ ಮೂವತ್ತು ಹಣ ನಾಣ್ಯಗಳಿಂದ ಏನು ಮಾಡಬೇಕು ಎಂದು ಚರ್ಚಿಸಿದರು. "ಇದು ಜೀವಹತ್ಯಕ್ಕೆ ಕೊಟ್ಟ ಕ್ರಯವಾದ್ದರಿಂದ ಅದನ್ನು ಕಾಣಿಕೆಪೆಟ್ಟಿಗೆಯಲ್ಲಿ ಹಾಕಬಾರದು ಎಂದರು" (ವಚನ 6). ಇಂಥ ಸಂಗತಿಗೋಸ್ಕರ ಹಳೆ ಒಡಂಬಡಿಕೆಯಲ್ಲಿ ಯಾವುದೇ ನಿಯಮವೂ ಇರಲಿಲ್ಲ, ಹೀಗಾಗಿ, ಅವರು ಮಾನವ ನಿರ್ಮಿತ ಇಯಮಗಳಲ್ಲಿ ಒಂದನ್ನು ಆಧರಿಸಬೇಕಾಯಿತು. J. W. McGarvey ರವರು ಅವರ ಅನಿಚ್ಛೆಯ ಬಗ್ಗೆ ವ್ಯಾಖ್ಯಾನಿಸುತ್ತಾ:

> ಕರ್ತನಿಗಾಗಿ ತೆಗೆದುಕೊಳ್ಳಲ್ಪಟ್ಟ ಹಣಕ್ಕಾಗಿ ಅಲ್ಲಿ ಒಂದು ವಿಚಿತ್ರ ತಿಳುವಳಿಕೆಯು ವಾಸ್ತವವಾಗಿ ಇತ್ತು ... ಮತ್ತು ಇದು ರಕ್ತಕ್ಕಾಗಿ ವ್ಯಯಿಸಿದ್ದು ಆಗಿತ್ತು. ಆದರೆ ಹೀಗೆ ಅದು ಕೊಡಲ್ಪಟ್ಟಾಗ ಅದನ್ನು ಅವರು ಮರಳಿ ತೆಗೆದುಕೊಳ್ಳಲಾರದಾದರು! ಅದಕ್ಕಿಂತ ಹೆಚ್ಚಾಗಿ ಅವರದ್ದು ವಿಚಿತ್ರ ತಪ್ಪೊಪ್ಪಿಗೆ ಆಗಿತ್ತು. ಯೂದನಿಗೆ ಕೊಟ್ಟ ಹಣವು ನೈಜ ಅಪರಾಧಿಯನ್ನು ಹಿಡಿಯಲು ಯೋಗ್ಯವಾಗಿ ಖರ್ಚುಮಾಡಿದ್ದಾದರೆ ಅದು ನ್ಯಾಯಬದ್ಧ ಹಣವಾಗುತ್ತಿತ್ತು, ಹಾಗೂ ರಕ್ತಸಿಕ್ತಹಣವಾಗುತ್ತಿರಲಿಲ್ಲ. ಎಂದು ಬರೆಯುತ್ತಾರೆ.[9]

ಅಧಿಕಾರಿಗಳು ಆ ಹಣವನ್ನು "ಕುಂಬಾರನ ಹೊಲವನ್ನು" ಕೊಲ್ಲಲು ಬಳಸುವುದಕ್ಕಾಗಿ ನಿರ್ಧರಿಸಿದರು. "ಕುಂಬಾರನ ಹೊಲವು" (ವಚನ 7). ಕುಂಬಾರನು ಮಡಿಕೆಯನ್ನು ಮಾಡಲು ಬಳಸುತ್ತಿದ್ದ ಮಣ್ಣನ್ನು ಹೊಂದಿದ ತುಂಡು ಭೂಮಿಯಾಗಿರಬಹುದು.[10] ಅಂಥ ಹೊಲವು ಬಹುಶಃ ಪೈರನ್ನು ಬೆಳೆಯಲು ಯೋಗ್ಯವಲ್ಲದ್ದಿರಬಹುದು. ಯೆಹೂದಿ ನಾಯಕರು ಆ ಆಸ್ತಿಯನ್ನು "ಪರದೇಶಿಗಳನ್ನು ಹೂಣಿಡುವುದಕ್ಕೋಸ್ಕರ" ಕೊಂಡರು (ವಚನ 7).[11] "ಪರದೇಶಿ ಗಳು" ಎಂಬುದು ಯೆರೂಸಲೇಮಿಗೆ ಭೇಟಿ ಇಡುವ ಯೆಹೂದ್ಯರಲ್ಲದವರು ಸತ್ತಾಗ ಎಂದು ಸೂಚಿಸುವುದಾಗಿರಬಹುದು. ಅನ್ಯರಿಗೆ ಯೆಹೂದಿಗಳ ಸಮಾದಿಯಲ್ಲಿ ಆಸ್ಪದವಿರಲಿಲ್ಲ.

ಮತ್ತಾಯನು ಈ ರೀತಿಯ ವ್ಯಾಖ್ಯಾನವನ್ನು ಇದಕ್ಕೆ ಸೇರಿಸಿದ್ದಾನೆ: "ಈ ಕಾರಣದಿಂದ ಈ ಹೊಲಕ್ಕೆ ಇಂದಿನವರೆಗೂ ಜೀವಹತ್ಯೆಯ ಹೊಲವೆಂಬ ಹೆಸರು ಇದೆ" (ವಚನ 8). ಅದು ಆ ಹೊಲವು "ಜೀವಹತ್ಯೆಯ ಹೊಲ" ಎಂದು ಕರೆಯಲ್ಪಡುತ್ತಿತ್ತು ಯಾಕೆಂದರೆ "ರಕ್ತಕ್ಕಾಗಿ ಕ್ರಯ" ಕೊಟ್ಟು ಕೊಂಡದ್ದಕ್ಕಾಗಿಯೇ (ವಚನ 6). "ಈ ದಿನ" ಎಂಬ ಪದವು ಮತ್ತಾಯನು ಇದನ್ನು ದಾಖಲಿಸುವ ಸಮಯ ಮತ್ತು ಈ ಘಟನೆಯ ಮಧ್ಯ ಕೆಲ ಸಮಯ ಸಾಗಿ ಹೋಗಿದೆ ಎಂದು ಇದು ಸೂಚಿಸುವುದಾಗಿದೆ (ಬಹುಶಃ ಮೂವತ್ತು ವರುಷಗಳು[12]).

ಆ ಘಟನೆಯು ಪ್ರವಾದನೆಯ[13] ಸಂಪೂರ್ಣತೆ ಎಂದು ತನ್ನ ಸಂಪ್ರದಾಯದಂತೆ, ಮತ್ತಾಯನು ಸಹ ಗುರುತಿಸಿದ್ದಾನೆ:

> ಹೀಗೆ ಪ್ರವಾದಿಯಾದ ಯೆರಮೀಯನು ಹೇಳಿದ ಮಾತು ನೆರವೇರಿತು ಅದೇನೆಂದರೆ ಅವರು ಮೂವತ್ತು ರೂಪಾಯಿಗಳನ್ನು ತೆಗೆದುಕೊಂಡು ಕರ್ತನು ನನಗೆ ಅಪ್ಪಣೆಮಾಡಿದಂತೆ ಅದನ್ನು ಕುಂಬಾರನ ಹೊಲಕ್ಕೆ ಕೊಟ್ಟರು. ಇದೇ ಅವರು ಕ್ರಯಕಟ್ಟಿದವನ ಬೆಲೆ ಇದೇ ಇಸ್ರಾಯೇಲ್ಯರಲ್ಲಿ ಕೆಲವರು ಕ್ರಯಕಟ್ಟಿದವನ ಬೆಲೆ

ಎಂಬುದು (ವಚನಗಳು 9, 10).

ವಚನ 9 ಮತ್ತು 10ರ ಮಾತುಗಳು ಯೆರಮೀಯನ ಪುಸ್ತಕದಲ್ಲಿ ಸಿಕ್ಕಲಾರವು, ಆದರೆ ಅದಕ್ಕೆ ಸಮೀಪವಾದ ಪದಗಳು ಜೆಕರ್ಯನ ಪುಸ್ತಕದಲ್ಲಿ ಸಿಕ್ಕುತ್ತವೆ (ಜೆಕರ್ಯ 11:12, 13), ವಿವಿಧ ವಿವರಣೆಗಳು ಈ ಪ್ರಕಟವಾದ ಕ್ರಮಭಂಗಕ್ಕೋಸ್ಕರ ಕೊಡಲಾಗಿವೆ. ಯೆರಮೀಯನು ಈ ಪದಗಳನ್ನು ಮಾತಾಡಿರಬೇಕು ನಂತರದಲ್ಲಿ ಜೆಕರ್ಯನು ಬರೆದಿರಬೇಕು.[14] ಬಹುಶಃ ಯೆರಮೀಯನು ಸೂಚಿದ್ದರಿಂದ, ಇದರ ಸ್ಪೂರ್ತಿಯಿಂದ ಜೆಕರ್ಯನು ಯೆರಮೀಯನ ಕುಂಬಾರನ (ಯೆರಮೀಯ 18:1-6; 19:1-13) ಮತ್ತು ಹೊಲವನ್ನು ಕೊಳ್ಳುವುದರ (ಯೆರಮೀಯ 32:9) ಬಗೆಗಿನ *ಮಾತುಗಳಿಂದ* ಪ್ರಭಾವಿತನಾಗಿರಬಹುದು.[15]

ಯೂದನ ಮರಣದ ದಾಖಲೆಯನ್ನು ಇಟ್ಟ ಪುಸ್ತಕ ಎಂದರೆ ಮತ್ತಾಯನ ಸುವಾರ್ತಾ ಪುಸ್ತಕವೊಂದೇ; ಆದರೆ ಲೂಕನು ಅದನ್ನು ನಂತರದಲ್ಲಿ ಸೂಚಿಸಿದ್ದಾನೆ, ಅಪೊಸ್ತಲರ ಕೃತ್ಯಗಳಲ್ಲಿ, ಇದಕ್ಕೆ ಸಂಬಂಧಿಸಿದ ಯೂದನ ಬದಲಿ ಆಯ್ಕೆಯ ಕಥೆಯು ಇದೆ:

> "... ಯೇಸುವನ್ನು ಹಿಡಿದುಕೊಂಡವರಿಗೆ ದಾರಿತೋರಿಸಿದ ಯೂದನ ವಿಷಯವಾಗಿ ..." (ಈ ಮನುಷ್ಯನು ತನ್ನ ದ್ರೋಹದಿಂದ ಸಂಪಾದಿಸಿದ ಹಣಕ್ಕೆ ಒಂದು ಹೊಲವನ್ನು ಕೊಂಡು ಕೊಂಡನು ಮತ್ತು ತಲೆಕೆಳಗಾಗಿ ಬಿದ್ದು ಅವನ ಹೊಟ್ಟೆ ಒಡೆದು ಕರಳುಗಳೆಲ್ಲಾ ಹೊರಗೆ ಸುರಿದವು. ಇದು ಯೆರೂಸಲೇಮ ನಿವಾಸಿಗಳಿಗೆಲ್ಲಾ ತಿಳಿದುಬಂದುದರಿಂದ ಆ ಹೊಲಕ್ಕೆ ಅವರ ಮಾತಿನಲ್ಲಿ ಅಕೆಲ್ದಮಾ, ಅಂದರೆ ಜೀವಹತ್ಯಯ ಹೊಲ ಎಂಬ ಹೆಸರು ಬಂತು) (ಅಪೊಸ್ತಲರ ಕೃತ್ಯಗಳು 1:16-19).

ಟೀಕಾಕಾರರು ಎರಡು ವಿವರಣೆಗಳ ಮಧ್ಯದ ವಿರೋಧಾಭಾಸವನ್ನು ಕಾಣಬಯಸುತ್ತಾರೆ: (1) ಯಾಜಕರು ಆ ಭೂಮಿಯನ್ನು ಕೊಂಡರು ಎಂದು ಮತ್ತಾಯನು ಹೇಳುತ್ತಾನೆ (ಮತ್ತಾಯ 27:7), ಯೂದನು ಅದನ್ನು ಹೊಂದಿದ್ದನು ಎಂದು ಲೂಕನು ಹೇಳುತ್ತಾನೆ (ಅಪೊಸ್ತಲರ ಕೃತ್ಯಗಳು 1:18). (2) ಯೂದನು ತಾನೇ ಉರ್ಲುಹಾಕಿಕೊಂಡನು ಎಂದು ಮತ್ತಾಯನು ಹೇಳಿದರೆ (27:5), ಲೂಕನು ಯೂದನು "ತಲೆಕೆಳಗಾಗಿ ಬೀಳುವುದರ" ಮೂಲಕ ಕೊಲ್ಲಲ್ಪಟ್ಟನು ಎಂದು ಸೂಚಿಸುತ್ತಾನೆ (ಅಪೊಸ್ತಲರ ಕೃತ್ಯಗಳು 1:18). (3) ಮತ್ತಾಯನು ಆ ಹೊಲವು "ರಕ್ತದ ಹೊಲ" ಎಂದು ಕರೆಯಲ್ಪಡುತ್ತದೆ ಯಾಕೆಂದರೆ ಅದು ರಕ್ತದ ಹಣದಿಂದ ಕೊಂಡದ್ದು ಎಂದು ಹೇಳುತ್ತಾನೆ (ಮತ್ತಾಯ 27:6, 8) ಆದರೆ ಲೂಕನು ಅದು ಆ ಹೆಸರನ್ನೇ ಹೊಂದಿತ್ತು ಎಂದು ಹೇಳುತ್ತಾನೆ. ಯಾಕೆಂದರೆ ಯೂದನು ರಕ್ತವು ಅದರಲ್ಲಿ ಚಲ್ಲಿತ್ತು (ಅಪೊಸ್ತಲರ ಕೃತ್ಯಗಳು 1:18, 19). ಹೇಗೂ, ಎರಡು ಪಾಠಾಂತರಗಳನ್ನು ಅಳವಡಿಸಿಕೊಳ್ಳುವದು ಕಷ್ಟಕರವಲ್ಲ:

- ಯಾಜಕರು ಯೂದನ ಹಣದಿಂದ ಹೊಲವನ್ನು ಕೊಂಡಿದ್ದರಿಂದ ಮೂಲವಾಗಿ ಕೊಂಡದ್ದು ಆತನೇ ಮತ್ತು ಆ ಭೂಮಿಯು ಅವನದೇ.
- ಯೂದನ ಕುಂಬಾರನ ಹೊಲದಲ್ಲಿದ್ದ ಮರಕ್ಕೆ ಉರ್ಲುಹಾಕಿಕೊಂಡು ಸತ್ತಿರಬಹುದು. ಮೃತ ದೇಹಕ್ಕೆ ಸಂಬಂಧಿಸಿದಂತದ್ದು ಯೆಹೂದಿ ಸಂಪ್ರದಾಯದ ಪ್ರಕಾರ ಅಶುದ್ಧ ಎಂದೇ ಪರಿಗಣಿಸಲಾಗುತ್ತಿದ್ದು, ಯಾರೊಬ್ಬರೂ ಅದನ್ನು ಮುಟ್ಟುವ ಹಾಗಿರಲಿಲ್ಲ (ವಿಶೇಷವಾಗಿ ಹಬ್ಬದ ಸಂದರ್ಭದಲ್ಲಿ). ಕೆಲ ರೀತಿಯಲ್ಲಿ, ಯೂದನ ನಿರ್ಲಕ್ಷಿಸಲ್ಪಟ್ಟ, ಬಿದ್ದಂಥ ಮತ್ತು ಹೊರಚಲ್ಲಿದಂಥ ಕೊಳತೆ ದೇಹವು ಹೊಲದಲ್ಲಿ ಬಿದ್ದಿತ್ತು.[16]
- ಆ ಆಸ್ತಿಯು "ಜೀವಹತ್ಯಯು ಹೊಲ" ಎಂದು ಕರೆಯುವುದಕ್ಕೆ ಎರಡು ಕಾರಣಗಳು

ಕೊಡಲ್ಪಟ್ಟಿವೆ ಮತ್ತಾಯನು ಒಂದನ್ನು ಕೊಟ್ಟರೆ; ಲೂಕನು ಇನ್ನೊಂದನ್ನು ಕೊಡುತ್ತಾನೆ.

ಎರಡು ವಿವರಗಳನ್ನು ಸೇರಿಸುವದು ಯೂದನ ಮರಣವು *ದುರಂತ* ಎಂದು ಮುಂದೆ ಒತ್ತಿ ಹೇಳುವುದಾಗಿದೆ. "... ಯಾವನು ಮನುಷ್ಯಕುಮಾರನನ್ನು ಹಿಡುಕೊಡುವವನೋ ಅವನ ಗತಿಯನ್ನು ಏನು ಹೇಳಲಿ. ಆ ಮನುಷ್ಯನು ಹುಟ್ಟದಿದ್ದರೆ ಒಳ್ಳೆಯದಾಗುತ್ತಿತ್ತು" ಎಂದು ಯೇಸು ಹೇಳಿದನು (ಮತ್ತಾಯ 26:24). ದೇವರಿಗೆ ಪ್ರಾರ್ಥನೆ ಮಾಡುವಲ್ಲಿ ಕ್ರಿಸ್ತನು ಯೂದನನ್ನು ಸೂಚಿಸುತ್ತಾ "ನಾಶನಕ್ಕೆ ಗುರಿಯಾದ ಆ ಮನುಷ್ಯನು" ಎಂದು ಸೂಚಿಸುತ್ತಾನೆ (ಯೋಹಾನ 17:12) - ಅದು "ಯೂದನು ಅಪೊಸ್ತಲತನವೆಂಬ ಈ ಸೇವಾಸ್ಥಾನದಿಂದ ಭ್ರಷ್ಟನಾಗಿ ತನಗೆ ತಕ್ಕ ಸ್ಥಳಕ್ಕೆ ಹೋಗಿರುವುದರಿಂದ [ಆತನು ಇರಬೇಕಾದ; NIV]" ಎಂದು ಪೇತ್ರನು ಮಾತನಾಡುತ್ತಾನೆ (ಅಪೊಸ್ತಲರ ಕೃತ್ಯಗಳು 1:25). ತನ್ನ ಒಳ್ಳೆಯತನದಿಂದಾಗಿ ಆತನು ಕರ್ತನಿಂದ ಎತ್ತಲ್ಪಟ್ಟನು,[17] ಯೂದನು ತನ್ನ ಅವಕಾಶವನ್ನು ಹಾಳುಮಾಡಿಕೊಂಡನು ಮತ್ತು ಸ್ವದೋಷರೋಪದಿಂದ ದ್ರೋಹಿಯಾಗಿಸತ್ತನು.

ಯೂದನು ತನ್ನನ್ನು ತಾನು ಕೊಂದುಕೊಳ್ಳದಿದ್ದರೆ ಏನಾಗುತ್ತಿತ್ತು? ಕ್ಷಮಾಪಣೆಗಾಗಿ ಆತನು ನಂತರದಲ್ಲಿ ಕೇಳಿದ್ದರೆ? ಯೇಸು ತನ್ನನ್ನು ನಿರಾಕರಿಸದ ಪೇತ್ರನನ್ನು ಸೇರಿಸಿ ಕೊಂಡ ಹಾಗೆಯೇ ಆತನನ್ನು ಕೂಡಾ ಮರಳಿ ಸೇರಿಸಿಕೊಳ್ಳುತ್ತಿದ್ದನು.[18] - ಎಂದು ನಾನು ನಂಬುತ್ತೇನೆ. ಯೂದನು ದೇವರ ಕೃಪೆಯಲ್ಲಿ ತನ್ನನ್ನು ತಾನು ಯಾಕೆ ಇರಿಸಿಕೊಳ್ಳಲಿಲ್ಲ? ಇದಕ್ಕೆ ಉತ್ತರವು ಗ್ರೀಕ್ ಭಾಷೆಯ ಭಾಷಾಂತರದಲ್ಲಿ ಸೂಚಿತವಾದಂತೆ "ಆತನು ಪಶ್ಚಾತ್ತಾಪಪಟ್ಟನು" ಮತ್ತಾನು 27:3ರಲ್ಲಿರುವಂತೆ: "ಆತನಿಗೆ ಮರಣದಂಡನೆಯಾಯಿತೆಂದು ತಿಳಿದು ನೋಡಿ ಪಶ್ಚಾತ್ತಾಪಪಟ್ಟನು ..."

KJV ಮತ್ತು RSV ಹೀಗೆ ಹೇಳುತ್ತದೆ ಯೂದನು "ಪಶ್ಚಾತ್ತಾಪಪಟ್ಟನು," ಆದರೆ ಗ್ರೀಕ್ *metanoeo* ಪದವು ಸಾಮಾನ್ಯಪದವಾದ "ಪಶ್ಚಾತ್ತಾಪ" ಎಂಬುದರಲ್ಲಿ ಇಲ್ಲ. "ಪಶ್ಚಾತ್ತಾಪ" ಎಂಬ ಪದವು ಮನಸ್ಸಿನ ಬದಲಾವಣೆಯನ್ನು ಸೂಚಿಸುವ ಒಂದೇ ಅರ್ಥವನ್ನು ಸೂಚಿಸುವುದಾಗಿದೆ.[19] ಮನುಷ್ಯನಿಗೆ ಅನ್ವಯಿಸುವುದಾದರೆ, ಇದು ಸಾಮಾನ್ಯವಾಗಿ ಹೃದಯದ ಮಹತ್ವದ ಬದಲಾವಣೆಯನ್ನು ಸೂಚಿಸುವುದಾಗಿದೆ. ಹೇಗೂ ಮತ್ತಾಯ 27:3ರಲ್ಲಿ ಬಳಿಕೆಯಾದ *metamellomai* ಎಂಬ ಪದವು ಹಿಂದಿನ ಕಾರ್ಯದ ಬಗೆಗೆ ಸೂಚಿಸುವುದಾಗಿದೆ.[20] ಆದರೆ ಹೃದಯದಿಂದಾಗುವ ಪಶ್ಚಾತ್ತಾಪವನ್ನು ಸೂಚಿಸುವುದಿಲ್ಲ.[21] NASBಯು ಈ ಅಪಾದವನ್ನು "ಅನುತಾಪಗೊಂಡನು" ಎಂದು ಭಾಷಾಂತರಿಸುತ್ತದೆ. McCord'ರ ಭಾಷಾಂತರವು "ವ್ಯಸನದಿಂದ ತುಂಬಿದ" ಎಂದು ಹೇಳುತ್ತದೆ.[22] NCVಯಲ್ಲಿ "ಬಲು ದುಃಖದಿಂದ ಕೂಡಿದ" ಎಂದಿದೆ AB ವಿಸ್ತರಿಸಿ ಹೀಗಿ ಹೇಳಿದೆ:

> ಯೂದನ ತನ್ನ ಗುರುದ್ರೋಹದಲ್ಲಿ, ಮರಣಂಡನೆಗೆ ಒಳಗಾದ [ಯೇಸುವನ್ನು] ನೋಡಿದನು, [ಯೂದನು ಮನದಲ್ಲ ತೊಳಲಾಡಿದನು ಮತ್ತು ತನ್ನ ಹಿಂದಿನ ಪ್ರಮಾದಕ್ಕಾಗಿ ತೊಂದರೆ ಪಟ್ಟನು] ಮತ್ತು ಅನುತಾಪದಿಂದ [ಅಲ್ಪವಾದ ಸ್ವಾರ್ಥದ ವ್ಯವಹಾರದ ಪರಿಣಾಮದಿಂದ] ಆತನು ಮೂವತ್ತು ಬೆಳ್ಳಿನಾಣ್ಯಗಳನ್ನು ಹಿಂದಕ್ಕೆ ತಂದನು ...[23]

ಯೂದನ ಮನಸ್ಸಾಕ್ಷಿಯು ನರಕಬಾಧೆಯನ್ನು ಅನುಭವಿಸಿತು ಆದರೆ ಆತನನ್ನು ಬದಲಾಯಿಸಲಿಲ್ಲ. ಆತನು ದುಖದಿಂದ ತುಂಬಿದವನಾದನು ಆದರೆ ಪ್ರಾಯಶ್ಚಿತದಿಂದಲ್ಲ. ತನ್ನ ನಂಬಿಕೆಯನ್ನು ಪರಿತ್ಯಜಿಸುವ ಮತ್ತು ತನ್ನ ಹೃದಯವನ್ನು ಕಠಿಣಮಾಡಿಕೊಳ್ಳುವ ಮೂಲಕ ಆತನು ತನ್ನ ನಿರೀಕ್ಷೆಯನ್ನು ತನ್ನ ನಿರೀಕ್ಷೆಯನ್ನು ಕಳೆದುಕೊಂಡನು. ಆತನ ಪೀಡಿಸುವ ಮನಸ್ಸುಮರಣವನ್ನು ಬಿಟ್ಟು ಯಾವುದೇ ಮಾರ್ಗವಿಲ್ಲ ಎಂಬ ಸಂಧಿಗ್ಧತೆಯತ್ತ ತಿರುಗಿತ್ತು.[24]

ಯೂದನ ಆತ್ಮಹತ್ಯೆಯೊಡನೆ ಒಂದು ನಿರರ್ಥಕವಾದ ಜೀವಿತವು ಒಂದುದುರಂತದ ಅಂತ್ಯವನ್ನು ಕಂಡಿತು.

## ವಿಜಯ
## (ಮತ್ತಾಯ 27:31-35, 37-39; ಮಾರ್ಕ 15:20-29; ಲೂಕ 23:26-33; ಯೋಹಾನ 19:17-22)

ಯೂದನ ಕಥೆಯಿಂದ ಯೇಸುವಿನೆಡೆಗೆ ತಿರುಗುವ ಸಮಯವು ಇದಾಗಿದೆ. ನಾವು ಆತನನ್ನು ಶಿಲುಬೆಗೆ ಹಾಕಲು ಮಾಡುತ್ತಿದ್ದ ಸಿದ್ಧತೆಗಳ ವೃತ್ತಾಂತವನ್ನು ಬಿಟ್ಟ ಮೇಲೆ: ಸೈನಿಕರಿಗೆ ಮರಣದಂಡನೆಯನ್ನು ವಿಧಿಸುವುದಕ್ಕೆ ಕಾರ್ಯವನ್ನು ಕೊಡಲಾಗಿದ್ದು ಅದಕ್ಕೆ ಬೇಕಾದ ಸೂಚನೆಗಳು ಕೊಡಲ್ಪಟ್ಟಿದ್ದವು (ನೋಡಿರಿ ಯೋಹಾನ 19:23; ಮತ್ತಾಯ 27:54), ಚಿನ್ಹೆಯು ಚಿತ್ರಿಕರಿಸಲ್ಪಟ್ಟಿತ್ತು (ಮತ್ತಾಯ 27:37), ಮತ್ತು ಅವಶ್ಯವಾದ ಕಾಗದ ಪತ್ರಗಳನು ಕೂಡಾ ಸಂಪೂರ್ಣವಾಗಿದ್ದವು.[25] ಕೆಲಸಾರಿ ಪ್ರಾಥಕಾಲ 9.00ರ[26] ಮುನ್ನಪ್ರತಿಯೊಂದು ಸಿದ್ಧವಾಗಿತ್ತು ಮತ್ತು ಮೆರವಣಿಗೆಯು ಉತ್ತರದಿಂದ ಸಿದ್ಧವಾಗಿತ್ತು.[27]

**ಮೆರವಣಿಗೆ**

ಶತಾಧಿಪತಿಯು (ನೋಡಿರಿ ಮತ್ತಾಯ 27:54), ಆ ಗುಂಪನ್ನು ಮುನ್ನಡೆಸುವವನಾಗಿದ್ದನು, ಮರಣಪೆಕ್ಷೆಪಡೆದವರು ಅಂದರೆ ಯೇಸು ಮತ್ತು ಇತರ ಇಬ್ಬರು ಸಾಮಾನ್ಯವಾಗಿ ಇರುತ್ತಿದ್ದ ಅಪರಾಧಿಗಳು ಅವನನ್ನು ಅನುಸರಿಸುವವರಾಗಿದ್ದರು (ಲೂಕ 23:32). ಅವರ ಹಿಂದೆ ಸೈನಿಕರು ಅವರನ್ನು ತಿವಿಯುತ್ತ ಬರುತ್ತಿದ್ದರು. ಆ ಆಪಾಯದಿಂದ ಆಕರ್ಷಿತವಾದ ಸಾಮಾನ್ಯವಾದ ಜನಜಂಗುಳಿಯು ಹಿಂಬದಿಯಲ್ಲಿತ್ತು. ಕುತೂಹಲದ ಗೀಳುಹಿಡಿದ ಅನೇಕರು ಅಲ್ಲಿಗೆ ಬಂದಿದ್ದರು, ಆದರೆ ಹೆಂಗಸರಲ್ಲಿ ಕೆಲವರು ಅತ್ತರು (ಲೂಕ 23:27).

ಸಂಪ್ರದಾಯದಂತೆ, ಯೇಸು "ತನ್ನ ಶಿಲುಬೆಯನ್ನು ತಾನೇ ಹೊತ್ತುಕೊಂಡ" (ಯೋಹಾನ 19:17) ಆ ಯಾತ್ರೆಯು ಪ್ರಾರಂಭವಾಯಿತು. "ಆ ಸಂಪೂರ್ಣ ಶಿಲುಬೆಯ ತೂಕವು ಬಹುಶಃ 300 ಪೌಂಡ್ (136 ಕಿ.ಗ್ರಾಂ.) ಆಗಿದ್ದುದರಿಂದ" ಬಹುಶ "ಶಿಲುಬೆಯ ಒಂದೇ ಹಲಿಗೆಯು" ತೂಕವು "75 ರಿಂದ 125 ಪೌಂಡ್ (34 ರಿಂದ 57 ಕ್ರಿ.ಗಾಂ.)"[28] ಆಗಿರಬಹುದು. ಅಷ್ಟು ದೂರದವರೆಗೆ ಯೇಸು ಆ ಭಾರವನ್ನು ಹೊರಲು ಅಸಮರ್ಥನಾಗಿದ್ದನು. ನಿದ್ರಾರಹಿತ ರಾತ್ರಿಯ, ನಿರಂತರ ಅವಮಾನದ ಮತ್ತು ರೋಮನ್ನದ ವಿಪ್ಲವದ ನಂತರ ಆತನು ಬಿದ್ದು ಹೋಗ ಬಹುದಿತ್ತು.[29] ಸೈನಿಕರು ಇದಕ್ಕೆ ಸಹಾಯಕವಾಗಿ ಇನ್ನೊಬ್ಬ ವ್ಯಕ್ತಿಯನ್ನು ಕಂಡುಕೊಂಡರು: "ಆ ಹೊಲದಿಂದ ಹೊರಟು ಆ ಮಾರ್ಗವಾಗಿ ಬರುತ್ತಿದ್ದ ಒಬ್ಬನನ್ನು ಆತನ ಶಿಲುಬೆಯನ್ನು ಹೊರವುದಕ್ಕೆ ಬಿಟ್ಟಿ ಹಿಡಿದರು ಇವನು ಯಾಕೆಂದರೆ (ಅಲೆಕ್ಸಾಂದ್ರ ರೂಪ ಎಂಬುವರ ತಂದೆಯಾದ) ಕುರೇನ ಪಟ್ಟಣದ ಸೀಮೋನನು" (ಮಾರ್ಕ 15:21).

ಕುರೇನವು ಉತ್ತರದ ಮಧ್ಯ ಆಫ್ರಿಕಾದ (ಈಗ ಲಿಬಿಯಾದ) ಕುರೇನ್ಯ ಜಿಲ್ಲೆಯ ರಾಜಧಾನಿಯಾಗಿತ್ತು. ಕುರೇನದ ಯೆಹೂದಿಗಳು ಯೆರೂಸಲೇಮಿನಲ್ಲಿ ಸಭಾಮಂದಿರವನ್ನು ಹೊಂದಿದ್ದರು (ಅಪೊಸ್ತಲರ ಕೃತ್ಯಗಳು 6:9). ಸಿಮೋನನು ಬಹುಶಃ ಮುಂಜಾನೆಯ ಪ್ರಾರ್ಥನೆಗಾಗಿ ದೇವಾಲಯಕ್ಕೆ ಬರುತ್ತಿರಬಹುದು ಆಗ ಸೈನಿಕರು ಆತನನ್ನು ಹಿಡಿದುಕೊಂಡಿರಬಹುದು.[30] ಅಲ್ಲಿ ಎಂಥ ಅಘಾತ ಆಗರಲಿಕ್ಕೆ ಸಾಕು!

ಸಿಮೋನನ ಮಕ್ಕಳ ಹೆಸರನ್ನು ಮಾರ್ಕನು ಹೇಳಿದಕೆ ವಾಸ್ತವವು ಓದುಗರು ಅವರ ಹೆಸರನ್ನು ಗುರುತಿಸಲಿ ಎಂದನು. ರೂಢ ಎಂಬುದು ರೋಮಾಪುರ 16:13ರಲ್ಲಿ ಪೌಲನಿಂದ ಸೂಚಿತವಾದ ರೂಪನು ಆಗಿರಬಹುದು. ಕುರೇನ್ಯದ ಯೆಹೂದಿಗಳು ಪಂಚಾಶತ್ತಮದಿನದಂದು

ಬಹುಶಃ ಪರಿವರ್ತಿತರಾಗಿರಬಹುದು (ಅಪೊಸ್ತಲರ ಕೃತ್ಯಗಳು 2:10, 37, 41). ನಂತರದಲ್ಲಿ, ಕುರೇನ್ಯದ ಕ್ರೈಸ್ತರು ಯೇಸುವಿನ ಬಗೆಗಿನ ಶುಭವಾರ್ತೆಯನ್ನು ಸಾರಿರಬಹುದು (ಅಪೊಸ್ತಲರ ಕೃತ್ಯಗಳು 11:20).

ಆ ತೊಲೆಯು ಯೇಸುವಿನಿಂದ ಸೀಮೋನನ ಹೆಗಲಿಗೆ ಹಸ್ತಾಂತರವಾದ ನಂತರ ಮೆರವಣಿಗೆ ಮುಂದಕ್ಕೆ ಸಾಗಿತು (ಲೂಕ 23:26).[31] ಆ ಬೀದಿಗಳು ಹಬ್ಬಕ್ಕಾಗಿ ಬಂದಂಥ ಯಾತ್ರಿಕರಿಂದ ಕೂಡಿದ್ದು ಜನಸಂದಣಿಯಿಂದ ತುಂಬಿದ ಬೀದಿಗಳ ಮೂಲಕದ ಪ್ರಗತಿಯು ನಿಧಾನವಾಗಿರಬಹುದು. ಒಂದು ಸ್ಥಳದಲ್ಲಿ ಗುಂಪು ನಿಲ್ಲಿಸಿದಾಗ ಗುಂಪಿನಲ್ಲಿ ಸ್ತ್ರೀಯರನ್ನು ಉದ್ದೇಶಿಸಿ ಮಾತನಾಡುವ ಬಲವನ್ನು ಯೇಸು ತಂದುಕೊಂಡನು:

> "ಯೆರೂಸಲೇಮಿನ[32] ಸ್ತ್ರೀಯರೇ ನನಗೋಸ್ಕರ ಅಳಬೇಡಿರಿ, ನಿಮಗೋಸ್ಕರವೂ ನಿಮ್ಮ ಮಕ್ಕಳಿಗೋಸ್ಕರ ಅಳಿರಿ ಯಾಕೆಂದರೆ 'ಬಂಜೆಯರು ಬಸುರಾಗದವರೂ ಮೊಲೆಕುಡಿಸದವರೂ ಧನ್ಯರು' ಎಂದು ಜನರು ಹೇಳುವ ದಿವಸಗಳು ಬರುತ್ತವೆ ಆ ಕಾಲದಲ್ಲಿ ಜನರು ಬೆಟ್ಟಗಳೇ 'ನಮ್ಮ ಮೇಲೆ ಬೀಳಿರಿ'; ಗುಡ್ಡಗಳೇ ನಮ್ಮನ್ನು ಮುಚ್ಚಿಕೊಳ್ಳಿರಿ ಅನ್ನುವರು. ಮರ ಹಸಿಯಾಗಿರುವಾಗಲೇ ಇಷ್ಟೆಲ್ಲಾ ಮಾಡಿದರೆ ಮರಣ ಒಣಗಿರುವಾಗ ಏನಾಗಬಹುದು?" (ಲೂಕ 23:28-31).

ಯೇಸುವಿನ ಮಾತುಗಳು ಬರಲಿರುವ ಮುತ್ತಿಗೆ ಮತ್ತು ಅಳಿಸಲಾಗದ ಯೆರೂಸಲೇಮಿನ ನಾಶನವನ್ನು ಸೂಚಿಸುವುದಾಗಿತ್ತು (ಕ್ರಿ.ಶ. 66-70). ಆ ವಿನಾಶನದ ಘಟನೆಗಳು ಮಕ್ಕಳನ್ನು ಹೊಂದಿದವರಿಗೆ ಇನ್ನೂ ಹೆಚ್ಚು ಕಷ್ಟದಾಯಕ ಆಗುವುದಿಲ್ಲ.[33] ವಚನ 30ರಲ್ಲಿನ ವಾಕ್ಯವು ಹೋಶೇಯ 8:10ರಲ್ಲಿ ವ್ಯಾಖೆಯು ಆಗಿದ್ದು, ನಿರಾಶರಾದ ಜನರು ಯಾವುದೇ ರೀತಿ ರಕ್ಷಣೆಗಾಗಿ ಕೂಗುವಂಥದ್ದಾಗಿದೆ. ಕ್ರಿಸ್ತ ಮಾತಿನ ಕೊನೆಯ ವಾಕ್ಯವು ರೋಮನ್ನರು ಈ ವಿಧಾನದಲ್ಲಿ "ಹಸಿರು ಮರವನ್ನು" (ಯೇಸುವನ್ನು) ನೋಡಿಕೊಳ್ಳುವುದಾದರೆ "ಒಣಗಿದಮರವನ್ನು" (ಯೆರೂಸಲೇಮನ್ನು) ಹೇಗೆ ನೋಡಿಕೊಳ್ಳಬಹುದೆಂದು ಊಹಿಸಿರಿಕೊಳ್ಳಿರಿ ಎಂದು ಸೂಚಿಸುವುದಾಗಿದೆ. ಇದನ್ನು ಇನ್ನೊಂದು ರೀತಿಯಲ್ಲಿ ಯೋಚಿಸಿರಿ: ಯೇಸುವು ರೋಮದ ವಿರುದ್ಧ ಬಂಡೇಳುವದಲ್ಲಿ *ನಿರಪರಾಧಿಯಾಗಿದ್ದಾಗಲೂ* ಕೂಡಾ ಆತನಿಗೆ ರೋಮನ್ನರು ಇದನ್ನು ಮಾಡಿದ್ದಾದರೆ, ಇಂಥ ಬಂಡೇಳುವ (60ರಲ್ಲಿನ ಪ್ರಕರಣದಂತಿರುವ) *ದೋಷದಲ್ಲಿರುವ* ಯೆರೂಸಲೇಮಿನ ಜನರ ಬಗ್ಗೆ ಇನ್ನೆಂಥಾ ಕಠಿಣ ಸಂಗತಿಗಳನ್ನು ಅವರು ಮಾಡಬಹುದು. ಹಸಿರುಮರವು ಸಜೀವವಾಗಿರುವುದಾಗಿದೆ. ಆದರೆ ಒಣಮರವು ಸತ್ತದ್ದಾಗಿದೆ ಎಂಬ ವಾಸ್ತವದ ಮೇಲೆ ಕ್ರಿಸ್ತನ ವಿವರಣೆಯು ಮೂಲವಾಗಿದ್ದು ಆತನು ಆತ್ಮೀಕವಾಗಿ ಜೀವಿಸುವವನಾಗಿದ್ದಾರೆ ಎಲ್ಲಾ ಪ್ರಾಯೋಗಿಕ ಉದ್ದೇಶಗಳಲ್ಲಿ ಯೆರೂಸಲೇಮು ಸತ್ತುಹೋಗಿದೆ.[34]

**ಗುರಿ**

ಜನಜಂಗುಳಿಯಿಂದ ಬೀದಿಗಳಿಂದಾಗ ಮೆರವಣಿಗೆ ಒಂದೆಡೆ ನಿಂತಿದ್ದಾದರೆ, ಮುಂದೆ ಬೇಗನೇ ತನ್ನ ಚಲನೆಯನ್ನು ಮುಂದುವರೆಸುತ್ತಿತ್ತು. ಶಿಲುಬೆಗೇರಿಸುವುದಕ್ಕೆ ಸಿದ್ಧಮಾಡಿದ ಸ್ಥಳದ ಗುರಿಯು "ಕಪಾಲಸ್ಥಳವೆಂಬ ಸ್ಥಾನ[35] ಇದಕ್ಕೆ ಇಬ್ರಿಯ ಮಾತಿನಲ್ಲಿ ಗೊಲ್ಗಥಾ ಎಂದು ಹೆಸರು" (ಯೋಹಾನ 19:17; ನೋಡಿರಿ ಮತ್ತಾಯ 27:33; ಮಾರ್ಕ 15:22; ಲೂಕ 23:33). ಲ್ಯಾಟೀನ್ ಭಾಷೆಯಲ್ಲಿ ಇದು "ಕಾಲ್ವರಿ" ಎಂದು ಹೆಸರಾಗಿತ್ತು (ನೋಡಿರಿ ಲೂಕ 23:33; KJV).[36]

ಗೊಲ್ಗಥಾವು "ಪಟ್ಟಣದ ಆಚೆ" (ಇಬ್ರಿಯ 13:12ಃ) "ಪಟ್ಟಣದ ಹತ್ತಿರ" (ಯೋಹಾನ 19:20) ಇದ್ದು ಸ್ಪಷ್ಟವಾಗಿ ಓಡಾಡುವುದಕ್ಕೆ ಯೋಗ್ಯವಾದ ರಸ್ತೆಯಾಗಿತ್ತು (ನೋಡಿರಿ ಮತ್ತಾಯ 27:39; ಮಾರ್ಕ 15:29). ಇದು ಕೇವಲ ಪಟ್ಟಣದ ಉತ್ತರ ಗೋಡೆಯಾಗಿದ್ದು ಉತ್ತರದಿಂದ

ಯೆರೂಸಲೇಮಿನತ್ತ ಸಾಗುವ ರಸ್ತೆಗೆ ಹತ್ತಿರವಾಗಿತ್ತು ಎಂದು ಅನೇಕರು ನಂಬುತ್ತಾರೆ. ಇದು ಪ್ರಮುಖ ಸ್ಥಾನ ವಾಗಿದ್ದು ಇದರ ಎತ್ತರದಲ್ಲಿರಬಹುದಾದ್ದರಿಂದ ಅವಿಧೇಯತೆಗೆ ಶಿಲುಬೆಗೆ ಹಾಕುವದು ಇದು ಒಂದು ಪಾಠವಾಗಿದೆ ಎಂದು ಎಲ್ಲರೂ ಪರಿಗಣಿಸಲೆಂದು ರೋಮನ್ನರು ಬಯಸಿರಬಹುದು. ಇದು ಹೆಚ್ಚಾಗಿ ಮೂರು ಉಚ್ಛವಾದ ಶಾಶ್ವತ ಸ್ಥಾನದವರು ತಮ್ಮ ನಂತರದ ಅಪರಾಧಿಗಳಿಗಾಗಿ ಸನ್ನದ್ಧರಾಗಿ ನಿಂತಿರುವದು ಮೊದಲೇ ನಿಶ್ಚಿತವಾದಂದತತ್ತಿತ್ತು.[37]

ವರ್ಷಗಳ ಉದ್ದಕ್ಕೂ, ಗೋಲ್ಗಥಾಕ್ಕೆ ಮೂರು ಸ್ಥಳಗಳು ಸೂಚಿಸಲ್ಪಟ್ಟಿದ್ದವು. ಸಮಾಧಿಯ ಸಾಂಪ್ರಾದಾಯಿಕ ಸ್ಥಳವು ನಾಲ್ಕನೆಯ ಶತಮಾನದಲ್ಲಿ ಕಟ್ಟಲ್ಪಟ್ಟಂಥ "ಪವಿತ್ರ ಸಮಾಧಿಯಿರುವ ಚರ್ಚ್" ಆಗಿದೆ. ಹತ್ತೊಂಬತ್ತನೆಯ ಶತಮಾನದಲ್ಲಿ, ಚಾರ್ಲ್ಸ್ ಗೋರ್ಡನ್ ದಮಸ್ಕ ಪಟ್ಟಕ್ಕೆ[38] ಕಾಲು ಮೈಲಿ ಹತ್ತಿರವಿರುವ "ಗೋರ್ಡನ್ಸ್ ಕಾಲ್ವರಿ" (ಅಥವಾ "ಗ್ರೀನ್ ಹಿಲ್") ಎಂಬ ಇನ್ನೊಂದು ಸ್ಥಳವನ್ನು[39] ಸೂಚಿಸಿದರು, ಆ ಸ್ಥಳವು ಎಲ್ಲೇ ಇರಲಿ, ಅದಕ್ಕೆ "ತಲೆ ಬುರುಡೆಯ ಸ್ಥಳ" ಎಂದು ಏಕೆ ಕರೆಯುತ್ತಾರೆ ಎಂಬುದು ನಿಶ್ಚಿತವಿಲ್ಲ. ಗೋರ್ಡನ್ಸ್ ಕಾಲ್ವರಿಯ ಬಂಡೆಗಳ ರಚನೆಯು ತಲೆಬುರುಡೆಯನ್ನು ಹೋಲುವದು, ಆದರೆ ಆ ಸ್ಥಳಕ್ಕೆ ಕೊಡಲ್ಪಟ್ಟ ಹೆಸರು ಭಯಂಕರ ಶೀರ್ಷಿಕೆಯಾದ್ದರಿಂದ ಸರಳವಾಗಿ ಇದು ಮರಣದ ಸ್ಥಳ ವಾಗಿತ್ತು.

**ಶಿಲುಬೆ ಹಾಕಿದ್ದು**

ಮೆರವಣಿಗೆಯು ಕೊನೆಗೂ ಗುರಿಯನ್ನು ತಲುಪಿತು. ಸೆರೆಯಾಳುಗಳ ಬಟ್ಟೆಗಳು ಹರಿದುಹೋಗಿದ್ದವು,[40] ಮತ್ತು ಅವರಿಗೆ ಮತ್ತು ಬರಿಸುವ ಹುಳಿ ದ್ರಾಕ್ಷಾರಸದಿಂದ ಮಾಡಿದ ಜಡಭರಿತವಾದ ಪಾನೀಯವನ್ನು ಕುಡಿಯಲು ಕೊಡಲಾಯಿತು (ಮತ್ತಾಯ 27:34; ಮಾರ್ಕ 15:23).[41] ಆ ನೋವನ್ನು ಮರೆಸುವ ಪಾನೀಯವನ್ನು ರುಚಿನೋಡಿದ ನಂತರ ಯೇಸು ನಿರಾಕರಿಸಿದನು (ಮತ್ತಾಯ 27:34). ಸಂಕಟಗಳ ಬಟ್ಟಲನ್ನು ಕುಡಿದವನು ಮದಬರಿಸುವ ಬಟ್ಟಲನ್ನು ಕುಡಿಯಲು ನಿರಾಕರಿಸಿದನು (ನೋಡಿರಿ ಯೋಹಾನ 18:11).

ನಂತರ, "ಅವರು ಆತನನ್ನು ಆ ದುಷ್ಕರ್ಮಿಗಳನ್ನೂ ಶಿಲುಬೆಗೆ ಹಾಕಿದರು" (ಲೂಕ 23:33). ಆದಿ ಓದುಗರು, ಆ ಕೆಲವು ಮಾತಿನಲ್ಲಿ ಎಷ್ಟೆಲ್ಲಾ ಅಡಗಿದೆ ಎಂಬುದನ್ನು ಅರಿತುಕೊಳ್ಳಲು ಕ್ರೂಜೆಗೆ ಹಾಕಿದ ಪ್ರತ್ಯಕ್ಷದರ್ಶಿಗಳನ್ನು ಹೊಂದಿದ್ದರು. ಶಿಲುಬೆಯ ತೊಲೆಗಳು ನೆಲದ ಮೇಲೆ ಇಡಲ್ಪಟ್ಟವು. ವದಾಕಾರನು[42] ಆ ಕೈಯನ್ನು ಎಳೆದಿರಬಹುದು ಮತ್ತು ಆ ತೊಲೆಯ ಮೇಲೆ ಆತನ ಮುಂಗೈ[43] ಆ ಕೈಯನ್ನು ಎಳೆದಿರಬಹುದು ಮತ್ತು ಆ ತೊಲೆಯ ಮೇಲೆ ಆತನ ಮುಂಗೈ ಬರುವ ಹಾಗೆ ತನ್ನ ಕಬ್ಬಿಣದ ಮೊಳೆಯು ಸ್ಥಾನದಲ್ಲಿ ಇರುವಂತೆ ಮಾಡಲು ಇರಿಸಿರಬಹುದು, ದೊಡ್ಡ ಮೊಳೆಯನ್ನು ಆತನ ಕಂಪಿಸುವ ಮಾಂಸದಿಂದ ಕಟ್ಟಿಗೆಯೊಳಕ್ಕೆ ಸೇರಿಸುವಂತೆ ಬಡಿದಿರಬಹುದು. ನಂತರ ಇನ್ನೊಂದು ಕೈಗೆ ಸಾಗಿರಬಹುದು ಮತ್ತು ಅದೇ ರೀತಿಯನ್ನು ಮುಂದುವರೆಸಿರಬಹುದು. ಸೆರೆಯಾಳು ಮೊಳೆಗಳಿಂದ ಗಟ್ಟಿಯಾದಾಗ, ಎರಡೂ ತೊಲೆಗಳು ಮತ್ತು ಅಪರಾಧಿ ಇಬ್ಬರೂ ಸೈನಿಕರಿಂದ ಎತ್ತಲ್ಪಡುತ್ತಿದ್ದರು ಮತ್ತು ಶಿಲುಬೆಯ ತೊಲೆಗಳು ಸರಿಯಾದ ಸ್ಥಳಗಳಲ್ಲಿ ಇರಿಸಲ್ಪಡುತ್ತಿದ್ದವು. ಶಿಲುಬೆಯ ತೊಲೆಗಳ ಸರಿಯಾದ ಇಡಲ್ಪಟ್ಟ ನಂತರ, ಅಪರಾಧಿಯ ಕಾಲುಗಳು ಮಡಿಸಲ್ಪಡುತ್ತಿದ್ದವು ಮತ್ತು ಆತನ ಪಾದಗಳ (ಹರಡುಗಳು) ತೊಲೆಯ ಮೇಲೆ ಇಟ್ಟು ಮೊಳೆಹೊಡೆಯಲ್ಪಡುತ್ತಿದ್ದವು (ನೋಡಿರಿ ಲೂಕ 24:39, 40).[44]

ಆಂಗ್ಲ ಅಕ್ಷರ "T" ಯನ್ನು ಹೋಲುವ Tau ಶಿಲುಬೆ ಮತ್ತು † ಆಕಾರದ ಜೊತೆ ಪ್ರಚಲಿತವಿರುವ ಲ್ಯಾಟೀನ್ ಶಿಲುಬೆಯನ್ನು ಒಳಗೊಂಡ ಅನೇಕ ವಿಧದ ಶಿಲುಬೆಗಳು ಬಳಸಲ್ಪಡುತ್ತಿದ್ದವು.[45] Tau ಶಿಲುಬೆಯ ಪ್ರಕರಣದಲ್ಲಿ, ಅಡ್ಡತೊಲೆಗಳು, ಸರಳವಾದ ಸ್ಥಾನದಿಂದ ಮೇಲಿನಿಂದ ಮೊಳೆಹೊಡೆಯಲ್ಪಡುತ್ತಿದ್ದವು. ಲ್ಯಾಟೀನ್ ಶಿಲುಬೆಯ ಬಗೆಗೆ

ಹೇಳಬೇಕೆಂದರೆ, ಅಡ್ಡತೊಲೆಗಳು ಎದುರಿನ ಮೇಲಿನ ತೊಲೆಯ ತುದಿಗೆ ಹತ್ತಿರದಲ್ಲಿ ಮೇಲೆ ಭದ್ರವಾಗಿ ಇರಿಸಲ್ಪಡುತ್ತಿದ್ದವು. Tau ಶಿಲುಬೆಯು ಪ್ಯಾಲಿಸ್ಟೈನ್‌ನಲ್ಲಿ ಕ್ರಿಸ್ತನ ಸಮಯದಲ್ಲಿ ರೋಮನ್ನರಿಂದ ಆಯಲ್ಪಟ್ಟಿತು. ಆದರೆ "ಕ್ರೂಜಿಸುವ ಅಭ್ಯಾಸವು ಭೌಗೋಳಿಕ ರೀತಿಯಿಂದ ಬೇರೆ ಬೇರೆ ಆಗಿದ್ದವು."[46] ಆದಿ ಸಂಪ್ರದಾಯದ ಪ್ರಕಾರ, ಯೇಸು ಲ್ಯಾಟೀನ್ ಶಿಲುಬೆಯ ಮೇಲೆ ಕ್ರೂಜಿಸಲ್ಪಟ್ಟನು. ಈ ಚಿನ್ಹೆಯು ವಾಸ್ತವವಾಗಿ ಯೇಸುವಿನ ತಲೆಯ ಮೇಲೆ ಅಂಟಿಸಲ್ಪಟ್ಟಿದ್ದು (ಮತ್ತಾಯ 27:37; ಲೂಕ 23:38; ನೋಡಿರಿ ಯೋಹಾನ 19:19) ಆ ಸಂಪ್ರದಾಯಕ್ಕೆ ಆಧಾರವಾಗಿರಬಹುದು.

ಆಗ ಇಬ್ಬರು ಕಳ್ಳರನ್ನು ತಂದು ಒಬ್ಬನನ್ನು [ಯೇಸುವಿನ] ಬಲಗಡೆಯಲ್ಲಿ ಒಬ್ಬನನ್ನು ಆತನ ಎಡಗಡೆಯಲ್ಲಿ ಆತನ ಸಂಗಡ ಹಾಕಿದರು (ಮತ್ತಾಯ 27:38; ನೋಡಿರಿ ಮಾರ್ಕ 15:27). ಇದು "ದ್ರೋಹಿಗಳೊಡನೆ ತಾನೂ ದ್ರೋಹಿ ಯೆಣಿಸಿಕೊಂಡನು" ಎಂಬ ಯೆಶಾಯನ ಪ್ರವಾದನೆಯನ್ನು ಪರಿಪೂರ್ಣಗೊಳಿಸಿತು (ಯೆಶಾಯ 53:12; ನೋಡಿರಿ ಲೂಕ 23:33; ಮಾರ್ಕ 15:28). ಮತ್ತಾಯ 27:38ರಲ್ಲಿ ಭಾಷಾಂತರಗೊಂಡ "ಕಳ್ಳರು" ಎಂಬ ಗ್ರೀಕ್ ಪದವು ಯೋಹಾನ 18:40ರಲ್ಲಿನ ಬರಬ್ಬನನ್ನು ವರ್ಣಿಸಲು ಬಳಸಿದ ಬಹುವಚನವಾಗಿದೆ. ಹಿಂಸೆಯು ಈ ಪದದ ಸಹಜಗುಣ ಆಗಿದೆ.[47] ಆ ಇಬ್ಬರು ಕಳ್ಳರು ಸಹ ಬರಬ್ಬನಂತಹ ದಂಗೆಯಲ್ಲಿ ಪಾಲ್ಗೊಂಡಿರುವ ಸಾಧ್ಯತೆಯು ಇದೆ. "ಅವನನ್ನು [ಯೇಸುವನ್ನು] ಕೊಲ್ಲಿಸು, ನಮಗೆ ಬರಬ್ಬನನ್ನು ಬಿಟ್ಟುಕೊಡು" ಎಂದು ಗುಂಪು ಒಟ್ಟಾಗಿ ಕೂಗುವ ತನಕ ಮಧ್ಯದ ಶಿಲುಬೆಯು ಕುಪ್ರಸಿದ್ಧ ಧರ್ಮಾಂತರ ಮಾಡಿಸುವವನಿಗೆ ಮೀಸಲಾಗಿದ್ದುದರ ಸಾಧ್ಯತೆಯೂ ಕೂಡಾ ಇದೆ (ಲೂಕ 23:18).

ಮೂವರು ಕೈದಿಗಳು ಶಿಲುಬೆಗೆ ಜಡಿಯಲ್ಪಟ್ಟ ಮೇಲೆ, ವಧಾಗಾರನು ಮಾಡಬೇಕಾದ ಒಂದು ಅಂತಿಮ ಕಾರ್ಯವು ಇತ್ತು: ಅದು ಅವರ ತಲೆಯ ಮೇಲೆ ಚಿನ್ಹೆಯ ಫಲಕವನ್ನು ಹಾಕುವದು. ಆ ಚಿಹ್ನೆಯ ಉದ್ದೇಶವು ಆ ವ್ಯಕ್ತಿಗಳ ವಿರುದ್ಧದ ಆಪಾಧನೆಯು ಆಗಿತ್ತು (ನೋಡಿರಿ ಮತ್ತಾಯ 27:37; ಮಾರ್ಕ 15:26). "ಈತನು ನಜರೇತಿನ ಯೇಸು, ಯೆಹೂದಿಗಳ ಅರಸನು"[48] ಎಂದು ಪಿಲಾತನು ತಾನೇ ಯೇಸುವಿನ ಮೇಲಿನ ಶಾಸನವನ್ನು ಬರೆಯಿಸಿದ್ದನು. ಈ ಬರಹವು ಇಬ್ರಿಯ, ಲ್ಯಾಟೀನ್, ಮತ್ತು ಗ್ರೀಕ್ ಭಾಷೆಯಲ್ಲಿ ಬರೆಯಲ್ಪಟ್ಟಿತ್ತು (ಯೋಹಾನ 19:20).

ಇಬ್ರಿಯ ಭಾಷೆಯು ಯೆಹೂದಿಗಳ ನಂಬಿಕೆಯ ಭಾಷೆಯಾಗಿತ್ತು, ಲ್ಯಾಟೀನ್ ರೋಮನ್ನರ ಕಾನೂನು ಭಾಷೆಯಾಗಿತ್ತು. ಮತ್ತು ಗ್ರೀಕ್ ಭಾಷೆಯು ಸಾಮಾನ್ಯವಾಗಿ ಎಲ್ಲರೂ ಆಡುತ್ತಿದ್ದ ಭಾಷೆಯಾಗಿತ್ತು. ಅಲ್ಲಿ ಹಾದುಹೋಗುತ್ತಿದ್ದವರು ಈ ಎಲ್ಲವನ್ನೂ ಓದದಿದ್ದರೂ ಮೂರರಲ್ಲಿ ಒಂದಾದರೂ ಭಾಷೆಯನ್ನು ಅವರು ಓದಬಹುದಿತ್ತು.

ಮಹಾಯಾಜಕನು ಇದಕ್ಕೆ ಅಕ್ಷೇಪ ವ್ಯಕ್ತಪಡಿಸುತ್ತಾ,[49] "ಯೆಹೂದ್ಯರ ಅರಸನೇ ಎಂದು ಬರೆಯದೆ ನಾನು ಯೆಹೂದ್ಯರ ಅರಸನು ಎಂದು *ಹೇಳಿದವನು* ಎಂಬುದಾಗಿ ಬರೆಯಬೇಕೆಂಬ" ಪಿಲಾತನಿಗೆ ಹೇಳಿದನು (ಯೋಹಾನ 19:21; ಒತ್ತಿ ಹೇಳಿದ್ದು ನನ್ನದು). ಹೇಗೂ, ದೇಶಾಧಿಪತಿಯು ಆ ಪದಗಳನ್ನು ಬದಲಾಯಿಸಲು ನಿರಾಕರಿಸಿದನು. ಅದಕ್ಕೆ ಆತನು ಪ್ರತಿಕ್ರಯಿಸುತ್ತಾ "ನಾನು ಬರೆದದ್ದು ಬರೆದಾಯಿತು" ಎಂದು ಉತ್ತರಿಸಿದನು (ಯೋಹಾನ 19:22). ಇದೊಂದು ಸಣ್ಣ ವಿಜಯವಾದಾಗ್ಯೂ, ಪಿಲಾತನು ಬಹುಶಃ ಅದರ ರುಚಿ ನೋಡಿರಬಹುದು.

ಇದು ಮುಂಜಾನೆಯ ಮತ್ತು ಮಧ್ಯಾಹ್ನದ ಮಧ್ಯದ ಕೇಂದ್ರಭಾಗವಾಗಿರಬಹುದು (ಮಾರ್ಕ 15:25). ಮೂವರು ವ್ಯಕ್ತಿಗಳು ರೋಮನ್ನರ ಶಿಲುಬೆಗೆ ನೇತುಹಾಕಲ್ಪಟ್ಟರು. ಗೋಲ್ಗಥಾದ ಮೇಲೆ ರೋಮನ್ ಸೈನಿಕರು, ಹೆಚ್ಚು ಕಡಿಮೆ ಯೆಹೂದಿಗಳು, ಅಪಹಾಸ್ಯಮಾಡುತ್ತಿರುವ ಜನಜಂಗುಳಿ, ಮತ್ತು ಕೇವಲ ಬೆಳವಣಿಗೆಯ ಕ್ರಿಸ್ತನ ಹಿಂಬಾಲಕರು ಅಲ್ಲಲ್ಲಿ ಹರಡಿಕೊಂಡಿದ್ದರು

(ಯೋಹಾನ 19:25). ಯೇಸುವಿಗಾಗಿ ಆರು ತಾಸುಗಳ ನೋವು ಅನುಭವಿಸುವಿಕೆ ಮತ್ತು ಆತನ ಮರಣಕ್ಕಾಗಿ ಆ ದೃಷ್ಯವು ಸಿದ್ಧಮಾಡಲ್ಪಟ್ಟಿತ್ತು.

ಈ ಪಾಠದ ಎರಡನೆ ಭಾಗದಲ್ಲಿ ನಾವು ಆ ಕಥೆಯನ್ನು ಎತ್ತಿಕೊಳ್ಳುವಾ. ನಾವು ಮುಗಿಸುವ ಮುನ್ನ ಯೂದನ ಮರಣವು ದುರಂತದಂತಾದರೆ ಯೇಸುವಿನ ಮರಣವು ವಿಜಯವಾಯಿತು ನಾನು ತಿರುಗಿ ಹೇಳಲು ಬಯಸುತ್ತೇನೆ. ಆ ಸಮಯದಲ್ಲಿ ಇದು *ವಿಜಯ* ಎಂದು ಕಾಣಲಿಲ್ಲ. ಆದರೆ ಅದು ವಿಜಯವು ಆಗಿದೆ ಯಾಕೆಂದರೆ ...

- ಯೇಸುವು ದೇವರ ಚಿತ್ತಕ್ಕೆ ತನ್ನನ್ನು ತಾನು ಸಂಪೂರ್ಣವಾಗಿ ಒಪ್ಪಿಸಿಕೊಂಡನು (ಲೂಕ 22:42). ದೇವರ ಚಿತ್ತವನ್ನು ಮಾಡುವ ಯಾರೇ ಆಗಲಿ ಅವರು ವಿಜಯಶಾಲಿಗಳು (ನೋಡಿರಿ ಪ್ರಕಟಣೆ 2:7[50]).
- ದೇವರು ತನ್ನನ್ನು ಎಬ್ಬಿಸುವ ವಾಗ್ದಾನವನ್ನು ಕೈಕೊಳ್ಳುತ್ತಾನೆ ಎಂಬ ನಂಬಿಕೆಯಿಂದ ಯೇಸುವು ನಂಬಿಕೆಯಿಂದ ಮರಣಿಸಿದನು. ಲೌಕಿಕವನ್ನು ಹತ್ತಿಕ್ಕಲು ನಂಬಿಕೆಯು ಆಗಲೂ ಮತ್ತು ಈಗಲೂ ವಿಜಯವಾಗಿದೆ (1 ಯೋಹಾನ 5:4).
- ಯೇಸು ತನ್ನ ವಿನಮ್ರ ಮರಣದಿಂದ ಕೆಟ್ಟತನದ ಸೇನೆಯನ್ನು ಸೋಲಿಸಿದನು (ಇಬ್ರಿಯ 2:14).
- ಯೇಸು ತನ್ನ ಬಲಿದಾನದ ಮರಣದಲ್ಲಿ ನಮ್ಮ ಪಾಪಗಳನ್ನು ತನ್ನ ಮೇಲೆ ತೆಗೆದುಕೊಂಡನು ಮತ್ತು ನಮ್ಮ ರಕ್ಷಣೆಯ ಸಾಧ್ಯತೆಯನ್ನು ಮಾಡಿದನು (ಯೆಶಾಯ 53:4-6; 1 ಕೊರಿಂಥ 15:3; 2 ಕೊರಿಂಥ 5:21)!
- ಶಿಲುಬೆಯ ಮೇಲೆ ತಾನು ಏಬಂದು ಮಾಡಬೇಕಾದ ಕಾರ್ಯವನ್ನು ಸಂಪೂರ್ಣಗೊಳಿಸಿದನು (ಯೋಹಾನ 19:30).

## ಮುಕ್ತಾಯ

ನಾನು ಅನೇಕ ಸವಸಂಸ್ಕಾರಗಳಲ್ಲಿ ಪ್ರಸಂಗಿಸಿದ್ದೇನೆ ಮತ್ತು ಅನೇಕವುಗಳಲ್ಲಿ ಪಾಲ್ಗೊಂಡಿದ್ದೇನೆ. ಇವುಗಳಲ್ಲಿ ಕೆಲವು ವಿಜಯಶಾಲಿಗಳು ಆಗಿವೆ: ದುಃಖಕರವಾದದ್ದೆಂದರೆ ಇವುಗಳಲ್ಲಿ ಕೆಲವು ದುರಂತಗಳು ಇವೆ. ನಿಮ್ಮದು ಯಾವುದಾಗಿರಬಹುದು? ನಿಮ್ಮ ಮರಣವು ಯೂದನ ಮರಣದಂತೆ ದುರಂತವಾಗಿಲ್ಲ ಮತ್ತು ಇದು ಯೇಸುವಿನ ಮರಣದಂತೆ ನಿಶ್ಚಿತವಾಗಿಯೂ ವಿಜಯವೂ ಆಗಿರುವುದಿಲ್ಲ. ಹಾಗಿದ್ದಾಗ್ಯೂ ನೀವು "ಸಜ್ಜನರು ಸಾವಿನ ರೀತಿಯ" (ಅರಣ್ಯಕಾಂಡ 23:10) ಮತ್ತು "ದುಷ್ಟನ ಸಾವಿನ" (ಯೆಹೆಜ್ಕೆಲ 33:11) ಮಧ್ಯದ್ದನ್ನು ನೀವು ಆರಿಸಿಕೊಳ್ಳಬೇಕು. ನೀವು ನಡೆಸುತ್ತಿರುವ ಜೀವನ ರೀತಿಯು ನಂತರದಲ್ಲಿ ನೀವು ಯಾವ ತರದ ಮರಣವನ್ನು ಹೊಂದುವಿರಿ ಎಂಬುದನ್ನು ನಿರ್ಧರಿಸುವುದಾಗಿದೆ. ನಿಮ್ಮ ಮರಣವು ವಿಜಯವಾಗಬೇಕೋ ದುರಂತವಾಗಬೇಕೋ?

## ಮಾಹಿತಿ

ಈ ಎರಡು ಭಾಗದ ಪಾಠದ ಬಳಸಲು ನೀವು ಬೇರೆಯಾಗಿ ತೆಗೆದುಕೊಂಡಿದ್ದೇ ಆದರೆ, ಈ ಮಂಡನೆಗೆ ನಂತರದಲ್ಲಿ ಇನ್ನೊಂದು ಪ್ರಸಂಗವನ್ನು ಸೇರಿಸುವ ಅವಶ್ಯಕತೆಯು ನಿಮಗಿದೆ.

### ಯೂದನ ಬಗೆಗೆ ಬೋಧಿಸುವದು

ಯೂದನ ವ್ಯಕ್ತಿ ಚಿತ್ರಣದ ಅಭ್ಯಾಸದಲ್ಲಿ ಒಂದು ಸಾಧ್ಯತೆಯು ಇದೆ. ನಮ್ಮ ಅಧ್ಯಯನದಲ್ಲಿ ಹೇಳಲ್ಪಟ್ಟ ಯೂದನಿಗೆ ಸಂಬಂಧಿಸಿದಂತಹ ವಿಷಯಗಳನ್ನು ಒಂದೆಡೆ

ನೀವು ಸೇರಿಸಿದ್ದಾದರೆ, ಒಂದು ಪ್ರಸಂಗಕ್ಕೆ ಬೇಕಾದ ಸಾಕಾಷ್ಟು ಸಂಗತಿಗಳನ್ನು ನೀವು ಪಡೆದಂತೆಯೇ. ಯೂದನ ಗುರುದ್ರೋಹದ ಕಥೆಗೆ ವ್ಯತ್ಯಾಸವಾದಂತಹ ಇನ್ನೊಂದು ಆಯ್ಕೆಯೆಂದರೆ ಪೇತ್ರನ ನಿರಾಕರಣೆಯೇ ಆಗಿದ್ದು, ಪಶ್ಚಾತ್ತಾಪ ಮತ್ತು ವಿಶಾದದ ಮಧ್ಯದ ಭಿನ್ನತೆಯನ್ನು ಒತ್ತಿಹೇಳುವದೇ ಆಗಿದೆ.

"ನಾನು ಪಾಪ ಮಾಡಿದೆನು" ಎಂಬ ಪಶ್ಚಾತ್ತಾಪದ ಮೇಲಿನ ಪಾಠದಲ್ಲಿನ ಯೂದನಿಂದ ಮಾತನಾಡಲ್ಪಟ್ಟ ಮೂರು ಪದಗಳನ್ನು ಬಳಸುವದೂ ಕೂಡಾ ಇನ್ನೊಂದು ತಲುಪುವಿಕೆಯ ಆಗಿದೆ (ನೋಡಿರಿ ಮತ್ತಾಯ 27:4). ಸತ್ಯವೇದದಲ್ಲಿ ಕೇವಲ ಕೆಲವೇ ಜನರು "ನಾನು ಪಾಪ ಮಾಡಿದೆನು" ಎಂದು ಪಶ್ಚಾತ್ತಾಪಪಟ್ಟರು. ಅವರಲ್ಲಿ ಫರೋಹನು (ವಿಮೋಚನಕಾಂಡ 9:27; 10:16), ಬಿಳಾಮ (ಅರಣ್ಯಕಾಂಡ 22:34), ಆಕಾನ (ಯೆಹೋವ 7:20), ಅರಸನಾದ ಸೌಲ (1 ಸಮುವೇಲ 15:24, 30; 26:21), ಮತ್ತು ಯೂದನು (ಮತ್ತಾಯ 27:4). ಈ ಪ್ರಶ್ನಾರ್ಥಕ ವ್ಯಕ್ತಿಗಳಿಗೆ ವ್ಯತ್ಯಾಸವಾಗಿ ದಾವೀದನಿಂದ (2 ಸಮುವೇಲ 12:13; 24:10). ತಪ್ಪಿಹೋದ ಮಗನಿಂದಲೂ (ಲೂಕ 15:21) ಕೂಡಾ ಕೆಲಮಾತುಗಳು ಅಡಲ್ಪಟ್ಟವು. ನಂತರದ ಪಶ್ಚಾತ್ತಾಪಗಳು ಪಶ್ಚಾತ್ತಾಪಪಡುವವರನ್ನು ಅವರು ಹಿಂದೆ ಮಾಡದಿದ್ದಾಗಲೂ ಕೂಡಾ ದೇವರಿಗೆ ಯಾಕೆ ಹತ್ತಿರವಾಗಿಸಿದವು ಎಂಬುದನ್ನು ಒತ್ತಿಹೇಳಿರಿ.

**ಕ್ರೂಜೆಯ ಬಗೆಗಿನ ಪ್ರಸಂಗ**

ಕ್ರೂಜಿಸುವುದರ ಬಗೆಗಿನ ನಮ್ಮಅಧ್ಯಯನವನ್ನು ನಾವು ಮುಗಿಸದೇ ಇದ್ದಾಗ್ಯೂ ಯೇಸುವಿನ ಮರಣದ ಬಗೆಗಿನ ಇನ್ನೊಂದು *ಸಾಮಾನ್ಯ* ಪ್ರಸಂಗವನ್ನು ಬೋಧಿಸುವ ಸಾಧ್ಯತೆಯು ಆಗಿದೆ. ಈ ಮಂಡನೆಯಲ್ಲಿನ ಪೀಠಿಕೆಯಲ್ಲಿ ಸೂಚಿಸಿದಂತೆ ಕ್ರೂಜೆಯ ಬಗೆಗಿನ ಬೋಧನೆಯ ಬಗೆಗಿನ ಸಂಗತಿಗಳಿಗೆ ಯಾವುದೇ ಕೊರತೆಯು ಇಲ್ಲ. ಯೌವನಸ್ಥ ಬೋಧಕರಾದಂಥ, ನಮಗೆ ಪ್ರಿಯವಾದ ಪ್ರಸಂಗವು "ಅವರು ಅಲ್ಲಿ ಆತನನ್ನು ಶಿಲುಬೆಗೆ ಹಾಕಿದರು" ಎಂಬುದೇ.[51] ವರ್ಷದುದ್ದಕ್ಕೂ ಯೇಸುವಿನ ಮರಣಕ್ಕಿಂತಲೂ ಹೆಚ್ಚು ವಿಷಯಗಳನ್ನು ಇದರ ಮೇಲೆ ಕಲಿಸಿದ್ದೇನೆ, ಬೋಧಿಸಿದ್ದೇನೆ, ಮತ್ತು ಬರೆದಿದ್ದೇನೆ. ಅದರಲ್ಲಿ ಒಂದು ಪುಸ್ತಕದ ಶೀರ್ಷಿಕೆಯು *ಯೇಸು ಕ್ರಿಸ್ತನು ಮತ್ತು ಆತನು ಕ್ರೂಜಿಸಲ್ಪಟ್ಟದ್ದು* ಎಂಬುದೇ.[52] ಈ ವಿಷಯವು 1 ಕೊರಿಂಥ 2:2ರಲ್ಲಿನ ಪೌಲನ ಮಾತುಗಳಿಂದ ಬಂದದ್ದಾಗಿದೆ. "ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವುದನ್ನು ತಿಳಿಯದವನಾಗಿ ನಿಮ್ಮಲ್ಲಿ ಇರುವೆನು." ಶಿಲುಬೆಯ ಬಗೆಗಿನ ಪಾಠಗಳ ತಯಾರಿಗೆ ಇರುವ ಒಂದು ಒಳ್ಳೆಯ ಮಾರ್ಗವೆಂದರೆ ಮಂಡನೆಗಳ ಮುಂಚೆ ಲೂಕ 23:26-56ರನ್ನು ವಾರಗಳ ಆರಂಭದಲ್ಲಿ ದಿನಕ್ಕೆ ಎರಡಾವರ್ತಿ ಓದುವುದೇ ಆಗಿದೆ.

---

ಟಿಪ್ಪಣೆಗಳು

[1]ಯೇಸುವು ರಕ್ಷಕನಾಗಿದ್ದಾನೆ ಎಂಬ ಸತ್ಯಾಂಶಕ್ಕೆ ಅನೇಕ ಆಧಾರಗಳು ಕೊಡಲ್ಪಟ್ಟಿವೆ. ಉದಾಹರಣೆಗೆ, "ಯೇಸು" ಇದರ ಅರ್ಥ ಯೆಹೋವನು ರಕ್ಷಿಸಿದನು ಎಂದು, ಆದರೆ ಯೇಸು ರಕ್ಷಿಸಿದ ರೀತಿಯು ತನ್ನ ಮರಣದ ಮೂಲಕ (ರೋಮಾಪುರ 5:10). [2]ವರುಷಗಳ ಪ್ರಮುಖ ಕ್ಷಣಗಳ ಕೆಲ ತಾಸುಗಳಲ್ಲಿ, ನಿಮಿಷಗಳಲ್ಲಿ, ಅಥವಾ ಸೆಕೆಂಡುಗಳಿದ್ದೂ ಕೂಡಾ ನಿದರ್ಶನವು ನಿಮಗೆ ಬೇಕಾಗಿದ್ದರೆ ಓಲಂಪಿಕ್ ಆಟಗಳಿಗಾಗಿ ತರಬೇತಿ ನೀಡುವವರ ಬಗ್ಗೆ ಯೋಚಿಸಿರಿ. ಅವರು ವರುಷಗಳಿಗೋಸ್ಕರ ತರಬೇತಿ ನೀಡುತ್ತಾರೆ, ಆದರೆ ಅವರ ಆಟಗಳು ಸಾಮಾನ್ಯವಾಗಿ ಒಂದು ನಿಮಿಷ ಅಥವಾ ಸೆಕೆಂಡುಗಳಲ್ಲೂ ಕೂಡಾ ಮುಗಿದುಹೋಗುತ್ತದೆ. [3]ನಾಲ್ವತ್ತು ವಾರದ ಕಾರ್ಯಕ್ರಮಕ್ಕೆ ಇದು ಅಗತ್ಯವಾದದ್ದಾರೆ ಈ ಎರಡು ಭಾಗಗಳನ್ನು ಜೋಡಿಸುವ ಅವಶ್ಯಕತೆಯು ನಿಮಗಿದೆ. ಸಮಯವು ಇದ್ದುದಾದರೆ ಎರಡೇ ವರ್ಗಗಳಲ್ಲಿ ಎಲ್ಲಾ ವಿಷಯಗಳನ್ನು ಯಶಸ್ವಿಯುತವಾಗಿ ಮುಗಿಸಬಹುದು.

[4]ಹಿಂದಿನ ಪಾಠದಲ್ಲಿ ಗಮನಿಸಿದ ಹಾಗೆ ಈ ಸಿದ್ಧತೆಗಳು ಸ್ಪಷ್ಟವಾಗಿ ಅನೇಕ ತಾಸುಗಳನ್ನು ತೆಗೆದುಕೊಳ್ಳುತ್ತವೆ. [5]ಮಹಾಯಾಜಕನು ನಂತರದಲ್ಲಿ ಗೋಲ್ಗಥಾದಲ್ಲಿ ಇದ್ದನು (ಮತ್ತಾಯ 27:41). ಅವರು ಒಂದು ಅಥವಾ ಎರಡು ತಾಸಿನಲ್ಲಿ ದೇವಾಲಯಕ್ಕೆ ಮರಳಿದ್ದಾದರೆ, ಅವರು ನಂತರದಲ್ಲಿ ಅವರು ವಧಾಸ್ಥಳಕ್ಕೆ ಹೋಗಿರಬಹುದು. [6]ಯೂದನ ಯೋಚನೆಯ ಬಗ್ಗೆ ನಮಗೆ ನಿಶ್ಚಿತತೆಯು ಇಲ್ಲ. ಇತರ ಸಾಧ್ಯತೆಗಳು ಕೂಡ ಸೂಚಿಸಲ್ಪಟ್ಟಿವೆ. [7]ಅವರು ನಿರಾಕರಣೆಯು ವಚನ 4 ಮತ್ತು 5ರಲ್ಲಿ ಸೂಚಿಸಲಾಗಿದೆ. [8]ಸ್ಪಷ್ಟವಾಗಿ ಯೂದನು ತನ್ನನ್ನು ತಾನು ಮಹಾಯಾಜಕರಿಂದ ಕೊಳ್ಳಲ್ಪಟ್ಟ (ಈ ಪಾಠದಲ್ಲಿ ನಂತರದಲ್ಲಿ ಚರ್ಚಿಸಲ್ಪಟ್ಟಂತೆ) ಕುಂಬಾರನ ಹೊಲದಲ್ಲಿ ಉರ್ಲು ಹಾಕಿಕೊಂಡನು. ಆ ಭೂಮಿಗಾಗಿ ಇರುವ ಸ್ಥಳವು ನಾಲ್ಕನೆಯ ಶಮಾನದಿಂದ ಯೆರೂಸಲೇಮಿನ ದಕ್ಷಿಣದಲ್ಲಿರುವ ಹಿನ್ನೋಮ್ ಕೊಳ್ಳದ ದಕ್ಷಿಣ ಇಳಿಜಾರಿನ ಪಶ್ಚಿಮದ ಕೊನೆಯ ಭಾಗವಾಗಿದೆ. (ಈ ಪುಸ್ತಕದಲ್ಲಿ ನಂತರದಲ್ಲಿ ಸಿಕ್ಕುವ ಯೆರೂಸಲೇಮು ಪಟ್ಟಣದ ನಕಾಶೆಯನ್ನು [ಯೇಸುವಿನ "ಕೊನೆಯ ತಾಸಿನ" ಮಾರ್ಗವನ್ನು ಸೂಚಿಸಿದ್ದರ ಜೊತೆಗಿನ] ನಕಾಶೆಯನ್ನು ನೋಡಿರಿ.) [9]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 721. [10]ಇದು ಮಣ್ಣಿನಿಂದ ಕೂಡಿರಬಹುದು ಅಥವಾ ಇಲ್ಲದಿರಬಹುದು ಇದು ಕೇವಲ ಒಬ್ಬ ಕುಂಬಾರನಿಂದ ಕ್ರಯಕ್ಕೆ ತೆಗೆದುಕೊಂಡಿದ್ದಾಗಿರಬಹುದು ಎಂದು ಕೆಲವರು ಯೋಚಿಸುವವರಾಗಿದ್ದಾರೆ. ಇನ್ನೂ ಕೆಲವರು "ಕುಂಬಾರನ ಹೊಲ" ಕೇವಲ ಆ ಹೊಲದ ಹೆಸರಾಗಿರಬಹುದು ಅದು ನಿಜವಾಗಿ ಕುಂಬಾರನಿಗೆ ಸಂಭಂದಿಸಿದರಬಹುದು ಇಲ್ಲದಿರಬಹುದು ಎಂದೂ ಯೋಚಿಸುವವರಾಗಿದ್ದಾರೆ.

[11]US, ನಲ್ಲಿ ಕುಂಬಾರ ಹೊಲ ಎಂಬುದು ಸಾಮಾನ್ಯವಾಗಿ ಉಪಯೋಗಿತವಾಗಿದ್ದು ಆಗಿದ್ದು ಸಂಸ್ಕಾರಮಾಡಲು ಯಾರೂ ಇಲ್ಲದ ಶವಗಳನ್ನು ಸರಕಾರದಿಂದ ಮಾಡಲ್ಪಡುವಂಥ ಸಮಾಧಿಗಳನ್ನು ಈ ರೀತಿಯಲ್ಲಿ ಕರೆಯಲು ಬಳಸುತ್ತಾರೆ. [12]*ಕ್ರಿಸ್ತನ ಜೀವನ ಚರಿತ್ರೆ, 1ನ್ನು* ಪುಸ್ತಕದಲ್ಲಿ ಸಿಕ್ಕುವ "ಮತ್ತಾಯನ ಪುಸ್ತಕ (ಅರಸನಾದ ಕ್ರಿಸ್ತನು)" ಎಂಬ ಪಾಠವನ್ನು ನೋಡಿರಿ. [13]*ಕ್ರಿಸ್ತನ ಜೀವನ ಚರಿತ್ರೆ, 1ನ್ನು* ಪುಸ್ತಕದಲ್ಲಿ ಸಿಕ್ಕುವ "ಮತ್ತಾಯನ ಪುಸ್ತಕ (ಅರಸನಾದ ಕ್ರಿಸ್ತನು)" ಎಂಬ ಪಾಠವನ್ನು ನೋಡಿರಿ. [14]ಯೆರಮೀಯನ ಮಾತುಗಳು ಬೆಬಿಲೋನಿಯ ಸೆರೆಹಿಡಿಯುವಿಕೆಯ ಬಗೆಗೆ ಇದ್ದವುಗಳು ಆಗಿವೆ. ಜೆಕರ್ಯ್ಯನು ನಂತರದಲ್ಲಿ ಅಲ್ಲಿ ಸೇವೆ ಮಾಡಿದನು. ಹೇಗೂ, ಯೆರಮೀಯನು ಮಾತನಾಡಿದನು ಆದರೆ ಬರೆಯಲಾರದ ಪದಗಳು ಸಾಗಿ ಹೋಗಿರಬಹುದು ಅಥವಾ ಪರಿಶುದ್ಧ ಆತ್ಮನು ಜೆಕರ್ಯ್ಯನಿಗೆ ಅವುಗಳ ಬಗ್ಗೆ ಮಾಹಿತಿಯನ್ನು ನೀಡಿರಬಹುದು. [15]ಇತರ ಸಾಧ್ಯತೆಗಳು ಕೂಡಾ ಸೂಚಿಸಲ್ಪಟ್ಟಿವೆ. ಮೊದಲ ಪ್ರತಿಯು ಅಜಾಗರೂಕತೆಯಿಂದ "ಜೆಕರ್ಯ್ಯನಿಂದ" ಬದಲು "ಯೆರಮೀಯ" ಎಂದು ಬದಲಾಗಿರಬಹುದು ಎಂದು ಯೋಚಿಸುವವರಾಗಿದ್ದಾರೆ. ಇಬ್ರಿಯದಲ್ಲಿ ಎರಡೂ ಅಕ್ಷರಗಳಲ್ಲಿನ ಸರಿದೂಗಿಸುವಿಕೆಯ ಅವಶ್ಯಕತೆಯು ಆಗಿದೆ (McGarvey and Pendleton, 721–22). [16]ಕೇವಲ ಮೂವತ್ತು ಬೆಳ್ಳಿ ನಾಣ್ಯಕ್ಕೋಸ್ಕರ ಹೇಗೆ ಕೊಳ್ಳಲ್ಪಡಬಹುದು ಎಂದು ವಿವರಿಸಲು ಸಹಾಯಿಸುವ ಕಡಿಮೆ ಖರ್ಚಿನಲ್ಲಿಯ ಆಸ್ತಿಯನ್ನು ಇದು ಮಾಡುವಂತಹದ್ದಾಗಿದೆ. [17]ಯೂದನು ಇದಕ್ಕೆ ಆಯ್ಕೆಯಾಗಲಿಲ್ಲ ಯಾಕೆಂದರೆ ಆತನು ಸಂಭವನೀಯ ಗುರುದ್ರೋಹಿಯಾಗಿದ್ದನು ಆದರೆ ಆತನ ಸಂಭವನೀಯತೆ ಎಂದರೆ ಆತನು ಶಿಷ್ಯನಾಗಿದ್ದನು. [18]ಯೂದನ "ದುಖ"ದ ಬಗ್ಗೆ ಉಚ್ಚರಿಸಿದಾಗ ಯಾರೊಬ್ಬರೂ ಆಕ್ಷೇಪಸಿದ್ದಾದರೆ, ನಾನು ಆತನಿಗೆ ದೇವರ ನ್ಯಾಯತೀರ್ಪು ನಿಜವಾದ ಪಶ್ಚಾತ್ತಾಪದ ಮೇಲಿನ ನಿಂತಿದೆ ಎಂದು ನಾನು ನೆನಪಿಸುವವನಾಗಿದ್ದೇನೆ. ಉದಾಹರಣೆಗೆ ನಿನವೆಯ ನಾಶವಾ ಗುತ್ತದೆಂಬ ಯೋನನ ಪ್ರವಾದಿಸಿದನು (ಯೋನ 3:4); ಜನರು ಪಶ್ಚಾತ್ತಾಪಟ್ಟಾಗ ದೇವರು ಆ ಪಟ್ಟಣವನ್ನು ಉಳಿಸಿದನು (ಯೋನ 3:5-10). [19]"ಪಶ್ಚಾತ್ತಾಪ" (*metanoeo*) ಭಾಷಾಂತರಗೊಂಡ ಗ್ರೀಕ್ ಸಂಯುಕ್ತ ಪದವಾಗಿದ್ದು "ನಂತರ" (*meta*) ಎಂಬ ಪದದ ಜೊತೆ "ಯೋಚನೆ" (*noema*) ಎಂಬ ಪದವನ್ನು ಜೋಡಿಸುವುದಾಗಿದೆ. ಇದರ ಅಕ್ಷ ರಾರ್ಥವು "ನಂತರ ವಿಚಾರ" ಎಂದು ಆಗಿದೆ. "ಒಬ್ಬನ ಮನಸ್ಸಿನ ಬದಲಾವಣೆಯನ್ನು" ಸೂಚಿಸುವದು ಆಗಿದೆ (ನೋಡಿರಿ ಮತ್ತಾಯ 21:29; ಇಬ್ರಿಯ 12:17) ಇದರ ಪರಿಣಾಮವು ಜೀವಿತದ ಬದಲಾವಣೆಯೇ ಆಗಿದೆ. ಪಶ್ಚಾತ್ತಾಪವು ಸಾಮಾನ್ಯವಾಗಿ "ಪಾಪದ ಬಗೆಗೆ ಮನಸ್ಸನ್ನು ಬದಲಾಯಿಸುವುದೇ ಆಗಿದೆ"-ಸಾಮಾನ್ಯವಾಗಿ ಪಾಪ ಮಾಡುವುದನ್ನು ನಿಲ್ಲಿಸುವ ನಿರ್ಧಾರವನ್ನು ಮತ್ತು/ಅಥವಾ ನಿರ್ಧಿಷ್ಟವಾದ ಪಾಪವನ್ನು ನಿಲ್ಲಿಸುವುದು ಎಂಬುದನ್ನು ಸೂಚಿಸುವುದಾಗಿದೆ. ಪಶ್ಚಾತ್ತಾಪವು ದೈವೀಕ ರೀತಿಯಲ್ಲಿ ದುಃಖಿಸುವುದಾಗಿದೆ. (ಗಮನಿಸಿ 2 ಕೊರಿಂಥ 7:10: "ದೇವರ ಚಿತ್ತಾನುಸಾರವಾಗಿರುವ ದುಃಖವು" ["ದೈವೀಕ ದುಃಖ"; KJV] ಒಬ್ಬನ ಪಾಪದ ಸಂಗತಿಗಳಿಂದ ಉಂಟಾಗುವ ದುಃಖವಾದ "ಲೋಕದ ದುಃಖದ" ಜೊತೆ ವ್ಯತ್ಯಾಸವಾಗಿದೆ.) [20]"ಕಾಳಜಿ ತೆಗೆದುಕೋ" ಎಂಬುದನ್ನು ಜೋಡಿಸುವ ಜೊತೆಯ ವಿಶೇಷಣ "ನಂತರ" ಎಂಬರ್ಥ

ಕೊಡುವ ಸಂಯುಕ್ತ ಪದದ ಪದವಾಗಿದೆ. ಇದು ಆ ಘಟನೆಯ "ನಂತರ" "ಕಾಳಜಿಯನ್ನು" ವಹಿಸುವುದನ್ನು ಇದು ಸೂಚಿಸುವುದಾಗಿದೆ.

[21]2 ಕೊರಿಂಥ 7:10ರಲ್ಲಿನ ಎರಡು ದುಃಖಗಳನ್ನು ಹೋಲಿಸಿರಿ. [22]Hugo McCord, *McCord's New Testament Translation of the Everlasting Gospel* (Henderson, Tenn.: Freed-Hardeman University, 1988), 40. [23]*Amplified Bible* ನಲ್ಲಿ *metamellomai* ಎಂಬ ಪದವು ಗ್ರೀಕ್‌ನ ಹಲವು ಪದಕೋಶಗಳಲ್ಲಿ ಸವಿಸ್ತಾರವಾಗಿ ವಿವರಿಸಲಾಗಿದೆ, Marvin R. Vincent and Richard C. Trench ಎಂಬವುಗಳು ಸೇರಿವೆ. [24]ಆತ್ಮಹತ್ಯೆಯ ಮೇಲೆ ಅಧ್ಯಯನವನ್ನು ನಡೆಸುವವರು ಹೇಳುವುದೇನೆಂದರೆ ಆತ್ಮಹತ್ಯಮಾಡಿಕೊಳ್ಳುವವರು ಯಾವಾಗಲೂ ಮರಣವನ್ನು ಸ್ವದಂಡನೆ ಎಂದು ನೋಡುವುದು ಅವರ ಏಕ ಮಾತ್ರ ಆಯ್ಕೆಯಾಗಿರುತ್ತದೆ. ಕರುಣೆಯುಳ್ಳ ದೇವರಲ್ಲಿ ಇನ್ನೊಂದು ಆಯ್ಕೆಯನ್ನು ಹೊಂದಿದ್ದೇವೆ ಎಂದು ತಿಳಿದವರು ತಮ್ಮ ಪಾಪವನ್ನು ಅರಿಕೆಮಾಡುತ್ತಾರೆ ದೇವರನ್ನು ಅದಕ್ಕಾಗಿ ಕ್ಷಮೆಕೋರುತ್ತಾರೆ ಮತ್ತು ಹೊಸ ಆರಂಭವನ್ನು ಮಾಡುತ್ತಾರೆ. [25]ಅಧಿಕಾರಿಗಳಿಂದ ನಡೆಸಲ್ಪಟ್ಟ ವಿಚಾರಣೆಯ ಲಿಖಿತ ದಾಖಲೆಗಳು ರೋಮಕ್ಕೆ ಕಳಿಸಲ್ಪಟ್ಟವು. [26]ವಧೆಯ ಸ್ಥಳವನ್ನು ಮುಟ್ಟುವುದಕ್ಕೆ ಸಮಯವು ತೆಗೆದುಕೊಳ್ಳಲ್ಪಟ್ಟಿತು ಮತ್ತು ಯೇಸು ಸುಮಾರು ಮುಂಜಾನೆ 9.00 ಘಂಟೆಗೆ ಶಿಲುಬೆಗೆ ಹಾಕಲ್ಪಟ್ಟನು (ಮಾರ್ಕ 15:25). [27]ಪಟ್ಟಣದ ಉತ್ತರದಲ್ಲಿರುವ ಗೋಲ್ಗಥಾದ ಸಾಧ್ಯತೆಯಿರುವ ಸ್ಥಳಕ್ಕಾಗಿ ಈ ಪಾಠದಲ್ಲಿ ಬರುವ ನಂತರದ ಚರ್ಚೆಯನ್ನು ನೋಡಿರಿ. [28]William D. Edwards, Wesley J. Gabel, and Floyd E. Hosmer, "On the Physical Death of Jesus Christ," *Journal of the American Medical Association* (21 March 1986): 1459. [29]ಪಾಲೇಸ್ತಿನಿಗೆ ನಡೆದು ಹೋಗುತ್ತಿದ್ದ ತೀವ್ರತೆಯ ಆಧಾರದಂತೆ ಆತನು (ಯೇಸು) ಬಲಾಢ್ಯವಾದ ದೇಹವನ್ನು ಹೊಂದಿದ್ದನು ಆದರೆ ಆತನು ನಮ್ಮಂತೆಯೇ ಮಾಂಸಖಂಡಗಳಲ್ಲಿ ಬಲಹೀನತೆಯನ್ನು ಹೊಂದಿದ್ದನು (ನೋಡಿರಿ ಯೋಹಾನ 1:14ಎ; ಇಬ್ರಿಯ 4:15). [30]ರೋಮನ್ನ ನಿಯಮದಂತೆ, ಸೈನಿಕರು ನಾಗರೀಕರ ಮೇಲೆ ಸಿಟ್ಟಿಗೇಳುವ ಅಧಿಕಾರಿಗಳನ್ನು ಹೊಂದಿದ್ದರು (ನೋಡಿ ಮತ್ತಾಯ 5:41).

[31]ಶಿಲುಬೆಯ ಮಾರ್ಗದ ಮೇಲೆ ಯೇಸು ಪ್ರಯಾಣಿಸುವಾಗ ಅಲ್ಲಿ ಇನ್ನೊಂದು ಮಾರ್ಗವು ಇತ್ತು (ಡೋಲೋರಸದ ಮಾರ್ಗವಾಗಿ), ಆದರೆ ಸರಿಯಾದ ಮಾರ್ಗವು ನಮಗೆ ತಿಳಿಯದು. ರೋಮವನ್ನು ವಿರೋಧಿಸಿದ ಪರಿಣಾಮದ ದೃಕ್ ಸಾಧನಗಳನ್ನು ನೋಡುವಂತೆ ವಧಾಸ್ಥಾನಕ್ಕೆ ಹೋಗುವಾಗ ರೋಮನ್ ಸೈನಿಕರು ಯಾವಾಗಲೂ ಸುತ್ತುಬಳಸಿಹೋಗುತ್ತಿದ್ದರು. [32]ಇವರು ಯೇಸುವನ್ನು ಗಲಿಲಾಯದಿಂದ ಹಿಂಬಾಲಿಸಿದ ಸ್ತ್ರೀಯರು ಅಲ್ಲ (ಮತ್ತಾಯ 27:55), ಆದರೆ ಇವರು ಯೆರೂಸಲೇಮಿನ ಪ್ರಜೆಗಳು ಆಗಿದ್ದರು. ಈ ಸ್ತ್ರೀಯರು ಯೇಸುವಿನ ಶಿಷ್ಯರೂ ಆಗಿದ್ದರೋ ಇಲ್ಲವೋ ಅಥವಾ ಅವರ ಅನುತಾಪವು ಕೇವಲ ನಿರ್ದೋಷಿ ಎಂದು ತಿಳಿದು ಮರಣಕ್ಕೆ ಒಪ್ಪಿಸಲ್ಪಟ್ಟ ಒಬ್ಬನ ಬಗ್ಗೆ ಇರುವ ಅನುಕಂಪವೂ ನಮಗೆ ತಿಳಿಯದು. [33]ದೇವರಿಂದ ಆಶೀರ್ವದಿಸಲ್ಪಟ್ಟ ಮಕ್ಕಳನ್ನು ಯಾರು ಹೊಂದಿದವರು ಎಂಬ *ನಿಯಮವು* ಉಂಟು (ನೋಡಿರಿ ಕೀರ್ತನೆ 127:3). [34]ನಿಮಗೆ ಬೇಕಾದರೆ ಈ ಉದಾಹರಣೆಯನ್ನು ವಿಸ್ತರಿಸಬಹುದು: ಉರಿಯು ದೊಡ್ಡದಾಗಿಲ್ಲದೆ ಮತ್ತು ಹಸಿರು ಕೊಂಬೆಗೆ ಬಿಸಿ ಮುಟ್ಟಿದೆ ಹೋದರೆ ಅದನ್ನು ಒಳಗಿಸಲು, ಸತ್ತರೆಂಬೆಗಳಿಗೆ ಏನು ಮಾಡಬೇಕು ಊಹಿಸಿರಿ. [35]"ತಲೆಬರುಡಗೆ" ಗ್ರೀಕ್ ಪದವು *cranion* ಎಂದಾಗಿದೆ. ವೈದ್ಯರು ತಲೆಬರುಡೆಯನ್ನು ಸೂಚಿಸಲು "cranium" ಎಂದು ಬಳಸುತ್ತಾರೆ. [36]"ಕಾಲ್ವರಿ" (ಲ್ಯಾಟಿ ವಾಲ್ಗೆಟಿನಿಂದ) KJVಯಲ್ಲಿ ಒಂದು ಸಾರಿ ಬಳಸಲ್ಪಟ್ಟಿದೆ ಮತ್ತು ಹೆಚ್ಚಾದ ಎಲ್ಲಾ ಆಧುನಿಕ ಭಾಷಾಂತರಗಳಲ್ಲಿ ಇದು ಸಿಕ್ಕದು. ಅದಲ್ಲದೆ ಇದು ಯೇಸುವನ್ನು ಕ್ರೂಜೆಗೆ ಹಾಕಿದ ಸ್ಥಳದ ಬಗ್ಗೆ ಅನೇಕ ಜನರಿಗೆ "ಅಧಿಕೃತ ಆಯ್ಕೆ" ಆಗಿದೆ. [37]ಇಹಲೋಕದ ಇತಿಹಾಸದ ಪ್ರಕಾರ, ತೊಲೆಯನ್ನು ಮೇಲಕ್ಕೆ ಶಾಶ್ವತವಾಗಿ ನೆಲದಲ್ಲಿ (the *stipes*) ಇಡುವುದು ಮತ್ತು ಕೈದಿಯು ಶಿಲುಬೆಯ ಹೊರೆಯನ್ನು ಹೊರುವದು (the *patibulum*) ಸಾಮಾನ್ಯವಾದ ಅಭ್ಯಾಸವಾಗಿದೆ (Edwards, Gabel, and Hosmer, 1458–59). [38]ಆ ಸ್ಥಳವನ್ನು ಗೋರ್ಡನ್ ತಿರಸ್ಕರಿಸುವ ಒಂದು ಕಾರಣವೆಂದರೆ, ಆತನ ದಿನಗಳಲ್ಲಿ, ಆ ಸ್ಥಳವು ಪಟ್ಟಣದ ಒಳಗೆ ಇತ್ತು, ಅದೇ ಸ್ಥಳವು ಕ್ರಿಸ್ತನ ಸಮಯದಲ್ಲಿ ಪಟ್ಟಣದ ಹೊರಗೆ ಇತ್ತು ಎಂದು ಆತನು ಅರಿತುಕೊಳ್ಳದೆ ಇರುವುದೇ ಆಗಿದೆ. ಪುರಾತತ್ವ ಶಾಸ್ತ್ರಜ್ಞರ ಚರ್ಚೆಯಂತೆ ಎರಡು ಸ್ಥಳಗಳು John McRay, *Archaeology and the New Testament* (Grand Rapids, Mich.: Baker Book House, 1991), 206–17ರಲ್ಲಿ ಕೊಡಲ್ಪಟ್ಟಿವೆ. [39]ಗೋಲ್ಗಥಾ ಗುಡ್ಡದ ಮೇಲಿದೆ ಎಂದು ಸತ್ಯವೇದವು ಹೇಳದಿದ್ದರೂ "ಕಾಲ್ವರಿಗುಡ್ಡ" ಎಂಬ ಪದದ ಹಲವಾರು ಬಾರಿ ಬಳಿಕೆಯು ಇರುವುದಾಗಿದೆ. ಈ ಪದವು ಬಹುಶಃ ಯೇಸು ಗೋರ್ಡನ್ ರವರ ಕಾಲ್ವರಿಯಲ್ಲಿ ಸತ್ತನು ಎಂಬ ಸಾಮಾನ್ಯವಾಗಿ ಬಂದಂಥ ದೃಷ್ಟಿಕೋನದ ಪರಿಣಾಮವಾಗಿದೆ. [40]ಸೈನಿಕರು ತಮ್ಮಲ್ಲಿ ಯೇಸುವಿನ ಬಟ್ಟೆಗಳನ್ನು ಹಂಚಿಕೊಂಡರು (ಮತ್ತಾಯ

27:35). ರೂಢಯಲ್ಲಿರುವ ಇತಿಹಾಸವು ಈ ಅಭ್ಯಾಸವನ್ನು ದೃಢೀಕರಿಸುವುದಾಗಿದೆ ಮತ್ತು ಕೀರ್ತನೆ 22:18ರ ಕೊನೆಯೆ ಸಾಲು ಈ ಪ್ರಕ್ರಿಯೆಯನ್ನು ಬಹುಶಃ ಸೂಚಿಸುವುದಾಗಿದೆ.

[41]ಈ ಪಾನಿಯವು ಕಾಳಜಿಯುಳ್ಳ ಯೆಹೂದಿ ಸ್ತ್ರೀಯರಿಂದ ಮಾಡಲ್ಪಟ್ಟಿದ್ದು ಯೆಹೂದಿಗಳಿಗೆ ರಿಯಾಯತಿ ತೋರಿಸಲೆಂದು ರೋಮನ್‌ರಿಂದ ಕೊಡಲ್ಪಟ್ಟದ್ದು ಆಗಿತ್ತು ಎಂದು ಕೆಲವರು ಸೂಚಿಸುವವರಾಗಿದ್ದಾರೆ. ಇದು ಹುಳಿದ್ರಾಕ್ಷಾರಸವಾಗಿದ್ದು ಕಹಿಮಿಶ್ರಣವಾಗಿತ್ತು ಎಂದು ಮತ್ತಾಯನು ಹೇಳಿದರೆ ಮಾರ್ಕನು ಇದು ರಕ್ತಬೋಳದ ಮಿಶ್ರಣವಾಗಿತ್ತು ಎಂದು ಹೇಳುತ್ತಾನೆ. ಈ ಎರಡೂ ಕಹಿ ವಸ್ತುಗಳು ಈ ಮಿಶ್ರಣದಲ್ಲಿ ಬಹುಶಃ ಸೇರಿರಬಹುದು. ರಕ್ತ ಬೋಳವು ಪಂಡಿತರ ಕಾಣಿಕೆಯಲ್ಲಿ (ಮತ್ತಾಯ 2:11) ಮತ್ತು ಯೇಸುವಿನ ದೇಹವನ್ನು ಹೂಳುವ ಸಿದ್ಧತೆಗೆ ಸಂಬಂಧಿಸಿದಂತೆ (ಯೋಹಾನ 19:39) ಈಗಾಗಲೇ ನಮ್ಮ ಅಧ್ಯಯನದಲ್ಲಿ ಮುಂಚೆಯೇ ಸೂಚಿಸಲ್ಪಟ್ಟದ್ದು ಆಗಿದೆ. ಇದಕ್ಕೆ ಜೊತೆಯಾದ ಇದರ ಇನ್ನಿತರ ಬಳಕೆಗಳು ಎಂದರೆ ಇದು ಕೆಲ ಔಷಧಿಗಳಲ್ಲಿ ಬಳಕೆಯಾಗುತ್ತಿತ್ತು. [42]ವಧಾಕಾರನು ಈ ವೇದಭಾಗದಲ್ಲಿ ವಿಶೇಷವಾಗಿ ಸೂಚಿಸಲ್ಪಟ್ಟಿದ್ದಾನೆ, ಆದರೆ ಶಿಲುಬೆಯ ಮೇಲೆ ಅಪರಾಧಿಗಳಿಗೆ ಮೊಳೆ ಹೊಡೆಯುವುದಕ್ಕೆ ಅನುಭವಿ ವ್ಯಕ್ತಿಯು ಬೇಕಾಗುತ್ತಿದ್ದನು: ಒಂದು ವೇಳೆ ಆ ಕಾರ್ಯವು ಸರಿಯಾಗಿ ಆಗದಿದ್ದರೆ, ದೇಹದ ಎಲ್ಲಾ ಭಾರವು ಮೊಳೆಯ ತಲೆಯ ಬಿದ್ದು ಮಾಂಸವನ್ನು ಹರಿದುಹೋಗುತ್ತಿತ್ತು. ವಧಾಕಾರನು ನಾಲ್ಕು ಜನ ಸೈನಿಕರಲ್ಲಿ ಒಬ್ಬನಿಗೆ ಈ ವಿವರವನ್ನು ಕೊಡಬೇಕಿತ್ತು (ನೋಡಿರಿ ಯೋಹಾನ 19:23). [43]ಪ್ರಾಚೀನ ವಾಸ್ತು ಶಾಸ್ತ್ರದ ಆಧಾರವು ಸೂಚಿಸುವಂತೆ "ಈ ಮೊಳೆಗಳು ಅಂಗೈಹೊಡಂಯುವ ಬದಲು ಮಣಿಕಟ್ಟಿಗೆ ಹೊಡೆಯುತ್ತಿದ್ದರು" (Edwards, Gabel, and Hosmer, 1459) ಹೊಸ ಒಡಂಬಡಿಕೆಯು ಯೇಸುವಿನ "ಕೈಗಳಲ್ಲಿನ" ಮೊಳೆಯ ಚಿತ್ರವನ್ನು ಸೂಚಿಸುವುದಾಗಿದೆ (ಯೋಹಾನ 20:25, 27; ನೋಡಿರಿ ಲೂಕ 24:39, 40). ಆದರೆ ಪ್ರಾಚೀನರು ಮುಂಗೈಯನ್ನು ಕೈಯಭಾಗವಾ ಗಿಯೇ ಪರಿಗಣಿಸುತ್ತಿದ್ದರು (Edwards, Gabel, and Hosmer, 1462). [44]ಮೊಣಕಾಲಿನ ಸ್ಥಿತಿಯ ಬಗೆಗೆ ಅನೇಕ ಏರಿತಗಳು ಇವೆ ಮೇಲಿನ ಭಾಗಕ್ಕೆ ಚಿಕ್ಕ ಕಟ್ಟಿಗೆ ಆಧಾರವು ಮೊಳೆಹೊಡೆಯುವಾಗ ಇರಬಹುದು ಅಥವಾ ಇಲ್ಲದಿರಬಹುದಿತ್ತು ಆದರೆ ಈ ಏರಿಳಿತಗಳ ಬಗ್ಗೆ ಬೈಬಲ್ ಯಾವುದೇ ಸುಳಿಯನ್ನು ಕೊಟ್ಟಿಲ್ಲ. [45]ಇನ್ನೊಂದು ವಿಧ ಎಂದರೆ X ಆಕಾರದ ಶಿಲುಬೆ. X ಆಕಾರದ ಶಿಲುಬೆಯ ಮೇಲೆ ಸೂಚನಾ ಫಲಕವೂ ಸಹ ತಲೆಯ ಮೇಲೆ ಹಾಕಬಹುದಿತ್ತು. ಈ ತರದ ಶಿಲುಬೆಯು ಯೇಸುವಿನ ವಧೆಯಲ್ಲಿ ಬಳಸಲ್ಪಡಲಿಲ್ಲ ಎಂದು ನಾವು ಬಲ್ಲವರಾಗಿದ್ದೇವೆ. [46]Edwards, Gabel, and Hosmer, 1458. [47]ಗ್ರೀಕ್ ಪದದ "ರಕ್ಯ" ಎಂಬುದನ್ನು ವಿರೋಧಿಸುತ್ತಾ ಆ ಪದವು ಕಳ್ಳತನವನ್ನು ಬಹು ಒತ್ತಾಯಪೂರ್ವಕವಾಗಿ ಸೂಚಿಸುವುದಾಗಿದೆ. *Kleptes*, from which we get "kleptomaniac" (W. E. Vine, *The Expanded Vine's Expository Dictionary of New Testament Words,* ed. John R. Kohlenberger III with James A. Swanson [Minneapolis: Bethany House Publishers, 1984], 973). [48]ಪೂರ್ಣ ಸಂಗತಿಗಳು ನಾಲ್ಕು ವಿವರಣೆಗಳಲ್ಲಿ ಪುನ ಮಾಡಲ್ಪಟ್ಟಿವೆ (ಮತ್ತಾಯ 27:37; ಮಾರ್ಕ 15:26; ಲೂಕ 23:38; ಯೋಹಾನ 19:19). [49]ಅವರು ಶಿಲುಬೆಯ ಹತ್ತಿರ ಇದ್ದುದರಿಂದ ಮತ್ತು ಪಿಲಾತನು ಅಲ್ಲಿಲ್ಲದ್ದರಿಂದ ಅವರು ಆತನ ಉತ್ತರಕ್ಕಾಗಿ ಒಂದು ಸಂದೇಶ ವನ್ನು ಅವನಿಗೆ ಕಳುಹಿಸಿದರು. ಶಿಲುಬೆಗೆ ಹಾಕುವವರೆಗೆ ಆ ಘಟನೆಯ ಸೂಚಿತವಾಗದಿದ್ದಾಗ್ಯೂ, ಪಿಲಾತನ ಮನೆಯಲ್ಲಿ ಅದನ್ನು ಮೊದಲು ನೋಡಿದ್ದಾಗ್ಯೂ ಅಕ್ಷೇಪಣೆಯು ಪಿಲಾಚನ ಹಿಂದೆ ಮಾಡಲ್ಪಟ್ಟಿತು. [50]ಪ್ರಕಟನೆ 2:7ರಲ್ಲಿನ "ಹತ್ತಿಕ್ಕು" ಗ್ರೀಕ್ ಪದವು "ವಿಜಯ" ಎಂಬ ಪದಕ್ಕಿರುವ ಕ್ರಿಯಾಪದವಾಗಿದೆ.

[51]David Roper, *"The Day Christ Came (Again)" and Other Sermons* (Dallas: Christian Publishing Co., n.d.), 15–28. [52]David Roper, *Jesus Christ and Him Crucified* (Arvada, Colo.: Christian Communications), 1976.